ಪೊಲೀಸ್ ನ್ಯೂಸ್ ಪತ್ರಿಕೆಯ ಪ್ರೀತಿಯ ಕೊಡುಗೆ **8**ನೇ ವರ್ಷದ ಹಾದಿಯಲ್ಲಿ...

# ಉದ್ಯೋಗ ಸ್ಫೂರ್ತಿ

UDYOGA SPOORTHI
Kannada Fortnightly
ಯಶಸ್ಸಿನ ಮೆಟ್ಟಿಲಿಗೊಂದು ದಿಟ್ಟ ಹೆಜ್ಜೆ...
ಪಾಕ್ಷಿಕ ಪತ್ರಿಕೆ

183ನೇ ಸಂಚಿಕೆ

Volume : 8 Issue : 3 BANGALORE 1-2-2017 to 20-2-2017 ಬೆಲೆ: ₹ 10/-

## ದಿನಾಂಕ 29–1–2017ರಂದು ನಡೆದ ಸ್ಪರ್ಧಾತ್ಮಕ ಪರೀಕ್ಷೆ

# PDO

## ಮತ್ತು ಸೆಕ್ರೆಟರಿ ಗ್ರೇಡ್–1ರ

# KEY ANSWERS

**PAPER - 1 : General Knowledge, General Kannada, General English**
**PAPER - 2 : Rural Development and Panchayath Raj-Karnataka Grama Swaraj and Panchayath Raj Act 1993 and Rules with Amendments**

## ಕರ್ನಾಟಕ ಪೊಲೀಸ್ ಇಲಾಖೆ ತರಬೇತಿ ಶಾಲೆ

## ಅನುಯಾಯಿ (ಪುರುಷ ಮತ್ತು ಮಹಿಳೆ) ಹುದ್ದೆಗಳು

ವಿದ್ಯಾರ್ಹತೆ : 7ನೇ ತರಗತಿ

## CRPF ಕಾನ್ಸ್‌ಟೆಬಲ್ ಹುದ್ದೆಗಳ ನೇಮಕಾತಿ

SSLC / PUC

# ದಿನಾಂಕ 29-1-2017ರಂದು ನಡೆದ ಪಿಡಿಓ ಮತ್ತು ಸೆಕ್ರೆಟರಿ ಗ್ರೇಡ್-1 ಸ್ಪರ್ಧಾತ್ಮಕ ಪರೀಕ್ಷೆಯ

# KEY ANSWERS

## PAPER - 1 : General Knowledge, General Kannada, General English

1. ಅಪರಾಂಬುಧಿ ಎಂಬ ಪದದ ಅರ್ಥ
ಎ. ಕೆಂಪು ಸಮುದ್ರ
ಬಿ. ಅರಬ್ಬೀ ಸಮುದ್ರ
ಸಿ. ಪಶ್ಚಿಮ ಸಮುದ್ರ
ಡಿ. ಲವಣ ಸಮುದ್ರ

2. ಸೌಮ್ಯಜಿತ್ ಘೋಷ್'ಗೆ ಸಂಬಂಧ ಪಟ್ಟ ಕ್ರೀಡೆ
ಎ. ಬ್ಯಾಡ್ ಮಿಂಟನ್
ಬಿ. ಟೇಬಲ್ ಟೆನ್ನಿಸ್
ಸಿ. ಬಿಲ್ಲುಗಾರಿಕೆ
ಡಿ. ಡಿಸ್ಕಸ್ ಥ್ರೋ

3. ಈ ಕೆಳಗಿನ ಪದಗಳಲ್ಲಿ ಯಾವುದು ಸರಿಯಾದ ಪದಪುಂಜ ಗುರುತಿಸಿ
ಎ. ನಿರ್ದೇಶಕ, ಜನಾರ್ದನ, ವಿದ್ಯಾರ್ಥಿ
ಬಿ. ನಿದ್ರೇಷಕ, ಝುನಾರ್ಧನ, ವಿದ್ಯಾರ್ಥಿ
ಸಿ. ನಿದ್ರೇಶಕ, ಜನಾರ್ಧನ, ವಿದ್ಯಾರ್ಥಿ
ಡಿ. ನಿರ್ದೇಷಕ, ಜನರ್ದನ, ವಿಧ್ಯಾರ್ಥಿ

4. ಕಡತಗಳಲ್ಲಿ 'ಮೋದಿ ಸ್ಕ್ರಿಪ್ಟ್' ಅನ್ನು ಅಳವಡಿಸಿದವರು
ಎ. ಮರಾಠರು ಬಿ. ಹೊಯ್ಸಳರು
ಸಿ. ಒಡೆಯರ್ ಡಿ. ಝಾಮೊರಿನ್ಸ್

5. ಅರಾವಳಿ ಪರ್ವತದಲ್ಲಿ ಅತೀ ಎತ್ತರವಾದ ಶಿಖರವೆಂದರೆ
ಎ. ಅಸ್ತಾಂಬ ದೋಂಗರ್
ಬಿ. ಮೌಂಟ್ ಗುರುಶಿಖರ
ಸಿ. ಅನೈಮುಡಿ
ಡಿ. ಅರ್ಮಕೊಂಡ

6. __________ the two brothers, the older one is more affectionate.
A. Both B. Between
C. Each of D. Of all

7. ಗ್ರಹವೊಂದು ಸೂರ್ಯನಿಗೆ ಸಮೀಪವಿದ್ದಾಗ ಆ ಸ್ಥಾನವನ್ನೇ ಹೀಗೆಂದು ಕರೆಯುತ್ತಾರೆ.
ಎ. ಅಪೋಜಿ ಬಿ. ಪೆರಿಜಿ
ಸಿ. ನೀಚಸ್ಥಾನ ಡಿ. ಉಚ್ಚಸ್ಥಾನ

8. 'ಪತಾಕೆ ಹಾರಿಸು' ಎಂದರೆ,
ಎ. ಕ್ರಾಂತಿಯನ್ನು ಮಾಡು
ಬಿ. ಶಾಂತಿ ಮಂತ್ರ ಪಠಿಸು
ಸಿ. ದಿಗ್ವಿಜಯ ಸಾಧಿಸು
ಡಿ. ಜಯ ಸಾಧಿಸಲು ವಿಫಲ

9. ಡ್ಯುಟೇರಿಯಂನ ಬೀಜಕೋಶದಲ್ಲಿ ಈ ರೀತಿ ಇದೆ.
ಎ. ಒಂದು ಪ್ರೋಟಾನ್ ಮತ್ತು ಎರಡು ನ್ಯೂಟ್ರಾನ್‌ಗಳು
ಬಿ. ಒಂದು ಪ್ರೋಟಾನ್ ಮತ್ತು ಒಂದು ನ್ಯೂಟ್ರಾನ್
ಸಿ. ಒಂದು ನ್ಯೂಟ್ರಾನ್ ಮತ್ತು ಎರಡು ಪ್ರೋಟಾನ್‌ಗಳು
ಸಿ. ಒಂದು ಪ್ರೋಟಾನ್ ಮತ್ತು ಮೂರು ನ್ಯೂಟ್ರಾನ್‌ಗಳು

10. 'ಅನಲ' ಪದಕ್ಕಿರುವ ಸಮನಾರ್ಥಕ ಪದ ಯಾವುದು ?
ಎ. ವಾಯು ಬಿ. ವರುಣ
ಸಿ. ಅಗ್ನಿ ಡಿ. ಧರಿತ್ರಿ

11. 'ಜಾತ' ಪದದ ವಿರುದ್ಧ ಪದಗಳನ್ನು ಗುರುತಿಸಿ
ಎ. ಅಜಾತ ಬಿ. ವಿಜಾತ
ಸಿ. ಸುಜಾತ ಡಿ. ಪಾರಿಜಾತ

12. 'ಲೌಕಿಕ' ಪದದ ವಿರುದ್ಧ ಪದವನ್ನು ಗುರುತಿಸಿ
ಎ. ಪ್ರಾಮಾಣಿಕ ಬಿ. ಕ್ಷುಲ್ಲಕ
ಸಿ. ಅಲೌಕಿಕ ಡಿ. ಲೋಕೈಕ

13. The antonym of the word "appear' is
A. inappear
B. Imappear
C. misappear
D. disappear

14. A span of ten years is
A. score B. annual
C. century D. decade

15. ಎಲ್ಲಾ ಸಾವಯವ ಸಂಯುಕ್ತಗಳಲ್ಲಿ ಇದ್ದೇ ಇರುವ ಧಾತು ಎಂದರೆ,
ಎ. ಗಂಧಕ ಬಿ. ಸಾರಜನಕ
ಸಿ. ಇಂಗಾಲ ಡಿ. ಕ್ಲೋರೀನ್

16. ಭಾರತೀಯ ಸಂವಿಧಾನದ ಈ ಕೆಳಕಂಡ ವಿಧಿಯು ಭಾರತದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೊಳಿಸಲು ಅವಕಾಶ ನೀಡುತ್ತದೆ.
ಎ. 42ನೇ ವಿಧಿ ಬಿ. 73ನೇ ವಿಧಿ
ಸಿ. 40ನೇ ವಿಧಿ ಡಿ. 53ನೇ ವಿಧಿ

17. 12 ಗಂಟೆ ತೋರಿಸುವಾಗ ಗಡಿಯಾರದ ಎರಡು ಮುಳ್ಳಿನ ನಡುವೆ ಎಷ್ಟು ಕೋನವಿರುತ್ತದೆ?
ಎ. $60^0$ ಬಿ. $0^0$
ಸಿ. $90^0$ ಡಿ. $30^0$

18. ಬೈಸಿಕಲ್‌ನ್ನು ಆವಿಷ್ಕರಿಸಿದವರು
ಎ. ಮ್ಯಾಕ್ ಮಿಲನ್
ಬಿ. ಆರ್ಕಿಮಿಡೀಸ್
ಸಿ. ಎಡಿಸನ್
ಡಿ. ವೋಲ್ಟಾ

19. ಕೇಂದ್ರ ಸರ್ಕಾರದ ಸಿನೆಮಾ ತರಬೇತಿ ಕೇಂದ್ರವನ್ನು ಈ ಕೆಳಕಂಡ ಜಾಗದಲ್ಲಿ ಸ್ಥಾಪಿಸಲಾಗಿದೆ.
ಎ. ಡೆಹ್ರಾಡೂನ್
ಬಿ. ಡಾರ್ಜಿಲಿಂಗ್
ಸಿ. ಕಡಕವಸ್ಲ
ಡಿ. ಪುಣೆ

20. I didn't __________ my paycheck this week.
A. recieve B. recieves
C. recieved D. receive

21. ಈ ಕೆಳಕಂಡ ಮೊಗಲ್ ರಾಜರಲ್ಲಿ ಒಬ್ಬರಿಗೆ ಓದುವುದು ಮತ್ತು ಬರೆಯುವ ಕಲೆ ಗೊತ್ತಿರಲಿಲ್ಲ
ಅ. ಹುಮಾಯೂನ್ ಬಿ. ಬಾಬರ್
ಸಿ. ಅಕ್ಬರ್ ಡಿ. ಜಹಂಗೀರ್

22. ಇತ್ತೀಚೆಗೆ ಕೃಷಿ ಆದಾಯ ತೆರಿಗೆಯನ್ನು ರದ್ದು ಮಾಡಿದ ರಾಜ್ಯ ಸರ್ಕಾರವನ್ನು ಗುರುತಿಸಿ
ಎ. ಕರ್ನಾಟಕ ಬಿ. ಅಸ್ಸಾಂ
ಸಿ. ಬಿಹಾರ ಡಿ. ರಾಜಸ್ಥಾನ

23. ಮನೆಯ ಗವಾಕ್ಷಿಗಳ ಮೂಲಕ ಕೆಟ್ಟಗಾಳಿಯು ಹೊರ ಹೋಗುವುದು ಈ ವಿಧಾನದಿಂದ
ಎ. ಉಷ್ಣವಹನ ಬಿ. ವಿಕಿರಣತೆ
ಸಿ. ಭಾಷ್ಪೀಭವನ ಡಿ. ಉಷ್ಣನಯನ

24. ಕನ್ನಡ ವರ್ಣಮಾಲೆಯಲ್ಲಿ ಎಷ್ಟು ವರ್ಗೀಯ ವ್ಯಂಜನಗಳಿವೆ?
ಎ. 21 ಬಿ. 20
ಸಿ. 23 ಡಿ. 25

25. 'ರೈತರಿಂದ ಹೊಲವು ಉಳಲ್ಪಡುತ್ತದೆ' ಈ ವಾಕ್ಯವು ಯಾವ ಪ್ರಯೋಗದಲ್ಲಿದೆ?
ಎ. ಕರ್ಮಣಿ ಪ್ರಯೋಗ
ಬಿ. ಕರ್ತರಿ ಪ್ರಯೋಗ
ಸಿ. ಕರ್ತೃ ಪ್ರಯೋಗ
ಡಿ. ಕ್ರಿಯಾ ಪ್ರಯೋಗ

26. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಕಾರ್ಯಕ್ರಮವನ್ನು ಆರಂಭಿಸಿದ ವರ್ಷ
ಎ. 1982 ಬಿ. 1980
ಸಿ. 1972 ಡಿ.. 1976

27. ನಕ್ಷತ್ರಗಳಲ್ಲಿ ಉತ್ಪತ್ತಿಯಾಗುವ ಶಕ್ತಿಯು ಈ ಕಾರಣದಿಂದ ಆಗುತ್ತದೆ.
ಎ. ಬೀಜಾಣು ವಿದಳನ
ಬಿ. ರಾಸಾಯನಿಕ ಕ್ರಿಯೆ
ಸಿ. ಬೀಜಾಣು ಸಮ್ಮಿಳನ
ಡಿ. ಯಾಂತ್ರಿಕ ಘರ್ಷಣೆ

28. ಕರ್ನಾಟಕದಲ್ಲಿ ಪಂಚಾಯತ್ ಮತ್ತು ಗ್ರಾಮೀಣ ಅಭಿವೃದ್ಧಿ ಖಾತೆಯನ್ನು ನೋಡಿಕೊಳ್ಳುತ್ತಿರುವವರು
ಎ. ಸತೀಶ್ ಜಾರಕಿಹೊಳಿ
ಬಿ. ಶರಣ್ ಪ್ರಕಾಶ್ ಪಾಟೀಲ್
ಸಿ. ಎಸ್.ಆರ್. ಪಾಟೀಲ್
ಡಿ. ಹೆಚ್.ಕೆ. ಪಾಟೀಲ್

29. ಮಾರುತಗಳನ್ನು ಅವುಗಳ ಗುಣಲಕ್ಷಣಗಳ ಜೊತೆ ಹೊಲಿಸಿ
List-I
1. ಚಿನೂಕ್ ಮಾರುತಗಳು
2. ಧ್ರುವೀಯ ಪೂರ್ವಮಾರುತಗಳು
3. ವಾಣಿಜ್ಯ ಮಾರುತಗಳು
4. ಪಶ್ಚಿಮ ಮಾರುತಗಳು
List-II
a. ತೀವ್ರತರ ಶೀತ ಪರಿಸ್ಥಿತಿಯನ್ನುಂಟು ಮಾಡುವುದು
b. ಅತಿ ನಿರಂತರ ಮತ್ತು ಸ್ಥಿರವಾದುದು
c. ಹಿಮ ಭಕ್ಷಕ
d. ದಕ್ಷಿಣಾರ್ಧ ಗೋಳದಲ್ಲಿ ಬೋರ್ಗರೆಯುವ ಪ್ರಭಲ ಮಾರುತಗಳು
ಎ. 1-c, 2-a, 3-d, 4-b
ಬಿ. 1-a, 2-c, 3-b, 4-d
ಸಿ. 1-d, 2-a, 3-b, 4-c
ಡಿ. 1-c, 2-a, 3-b, 4-d

30. ಅಯೋಡೀನ್ ಹೊಂದಿರುವ ಹಾರ್ಮೋನು
ಎ. ವ್ಯಾಸೊಪ್ರೆಸಿನ್ ಬಿ. ಪ್ರೊಲ್ಯಾಕ್ಟಿನ್
ಸಿ. ಆಡ್ರಿನ ಲಿನ್
ಡಿ. ಥೈರಾಕ್ಸಿನ್

31. ರಾಜ್ಯಸಭೆಯನ್ನು ಪ್ರ'ಥ'ವ'ಂ ವಾ ಗಿ ರಚಿಸಿದ್ದು
ಎ. 2ನೇ ಏಪ್ರಿಲ್ 1954
ಬಿ. 13ನೇ ಮೇ 1952
ಸಿ. ಜನವರಿ 1, 1951
ಡಿ. 3ನೇ ಏಪ್ರಿಲ್ 1952

32. ಈಗಿನ ಇಸ್ರೊ (ISRO) ಅಧ್ಯಕ್ಷರು
ಎ. ಎ.ಎಸ್.ಕಿರಣ್ ಕುಮಾರ್
ಬಿ. ಎಸ್. ರಾಮಕೃಷ್ಣನ್
ಸಿ. ವೈ.ಎಸ್. ಪ್ರಸಾದ್
ಡಿ. ಕೆ. ರಾಧಾಕೃಷ್ಣನ್

33. ಈ ಕೆಳಗಿನ ಸಾಲುಗಳಲ್ಲಿ ಕೆಲವು ದೋಷಪೂರಿತ ಪದಗಳಿವೆ. ಅವುಗಳನ್ನು ಕೆಳಗೆ ನೀಡಿರುವ ಉತ್ತರದ ಮೂಲಕ ಸರಿಪಡಿಸಿ..
ಮೂಡಲ ಮನೆಯಾ ಮುತ್ತಿನ ನೀರಿನ ಎರಕವಾ ..........
ಎ. ಬೈದಾ ಬಿ. ಹುಯ್ದಾ
ಸಿ. ಹೊಯ್ದಾ ಡಿ. ತೋಯ್ದಾ

34. The passengers were asked to ________ accepting eatables from co-passengers.
A. evade B. reject
C. avoid D. refuse

35. ಅನ್ಯಭಾಷಾ ಪದವನ್ನು ಗುರುತಿಸಿ
ಎ. ಜಾಮೂನು ಬಿ. ಹಸು
ಸಿ. ಊರು ಡಿ. ಆಕಾಶ

36. ವೇಗವಾಗಿ ಪ್ರಿಂಟ್ ಮಾಡುವ ಸಾಧನ
ಎ. ಜೆಟ್ ಪ್ರಿಂಟರ್
ಬಿ. ಇಂಕ್ ಜೆಟ್ ಪ್ರಿಂಟರ್
ಸಿ. ಥರ್ಮಲ್ ಪ್ರಿಂಟರ್
ಡಿ. ಲೇಸರ್ ಪ್ರಿಂಟರ್

37. 'ಅಡಿ' ಪದಕ್ಕಿರುವ ಇತರ ಅರ್ಥಗಳು
ಎ. ಆಳತೆ, ಸಾಲು, ಪಾಲು
ಬಿ. ಪಾದ, ಪದ, ಸಾಲು
ಸಿ. ಪಾಡು, ಹಾಡು, ಕಾಡು
ಡಿ. ಆಳತೆ, ಪಾದ, ಕೆಳಗೆ

38. Choose the correctly spelt word from the following:
A. parlament B. Parlement
C. Parliament D. Parliment

39. ಅತೀ ಶಕ್ತಿಯುತವಾದ ಆಕರ್ಷಣಾ ಶಕ್ತಿಯು ............ ಆಗಿದೆ.
ಎ. ವಿದ್ಯುತ್ ಸ್ಥಿರ ಬಲ ಮತ್ತು ಗುರುತ್ವಾಕರ್ಷಣ ಬಲ ಎರಡೂ
ಬಿ. ವಿದ್ಯುತ್ ಸ್ಥಿರ ಬಲ
ಸಿ. ಬೈಜಿಕ (ಅಣು) ಬಲ
ಡಿ. ಗುರುತ್ವಾಕರ್ಷಣ ಬಲ

40. I ________ that the door was locked properly, when I left the house.


ನೇವಿಯಲ್ಲಿ ನೇರ ನೇಮಕಾತಿ
ಮರ್ಚೆಂಟ್‌ನ ನೇವಿಯಲ್ಲಿ ಸೀಮ್ಯಾನ್, ಟೆಕ್ನಿಕಲ್ ಆಫೀಸರ್ ಮತ್ತು ನಾವಿಕರು ಹಾಗೂ ವಿವಿಧ ಹುದ್ದೆಗಳಿಗೆ ನೇರ ನೇಮಕಾತಿ
ಸ್ಥಳ: ಮಂಗಳೂರು, ಕಾರವಾರ, ಗೋವಾ, ಮುಂಬಯಿ, ಕೋಲ್ಕತ್ತಾ, ಚೆನ್ನೈ, ಗುಜರಾತ್ ಹಾಗೂ ವಿದೇಶಗಳಲ್ಲಿ.
ವಯಸ್ಸು: 17 ರಿಂದ 28 ವರ್ಷ.
ವಿದ್ಯಾರ್ಹತೆ: SSLC/PUC, ITI, Degree, Diplomo Pass / Fail.
ಅಭ್ಯರ್ಥಿಗಳು ತಮ್ಮ Marks Card & Photo, Bio-data ದೊಂದಿಗೆ ಈ ಕೆಳಕಂಡ E-mail ಐಡಿಗೆ ಕಳುಹಿಸುವುದು ಹಾಗೂ ಕಡ್ಡಾಯವಾಗಿ ತಮ್ಮ ಮೊಬೈಲ್ ನಂಬರನ್ನು ನಮೂದಿಸುವುದು. ವಿದ್ಯಾರ್ಹತೆಗೆ ತಕ್ಕಂತೆ ಪೋಸ್ಟಿಂಗ್ ಇರುತ್ತದೆ.
ಸಂಬಳ: ರೂ. 25,000/- ದಿಂದ ರೂ. 50,000/- ವರೆಗೆ.
M: 07249593790
E-mail: chougulenavyjobservice@gmail.com
(ಜಾಹೀರಾತು)

A. ushered B. insured
C. assured D. ensured

41. ನಾಡಿಬಡಿತ ಅಳತೆ ಮಾಡಲು ಉಪಯೋಗಿಸುವ ಸಾಧನ
ಎ. ಹೈಗ್ರೋಮೀಟರ್
ಬಿ. ಉಷ್ಣತಾ ಮಾಪಕ
ಸಿ. ಅಮ್ಮೀಟರ್
ಡಿ. ಸ್ಪಿಗ್ಮೋಮಾನೋ ಮೀಟರ್

42. 'ಗೋಲ್ಡನ್ ರೈಸ್'ನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ರುವುದು
ಎ. ವಿಟಮಿನ್ ಸಿ ಬಿ. ವಿಟಮಿನ್ ಎ
ಸಿ. ವಿಟಮಿನ್ ಬಿ ಡಿ. ವಿಟಮಿನ್ ಡಿ

43. 'ಸೀತೆಯು ರಾಮನೊಂದಿಗೆ ಕಾಡಿಗೆ ಹೋದಳು' ಇದು ಯಾವ ರೂಪದಲ್ಲಿದೆ ?
ಎ. ವರ್ತಮಾನ ಕಾಲ
ಬಿ. ವರ್ತಮಾನ ಭವಿಷ್ಯತ ಕಾಲ
ಸಿ. ಭವಿಷ್ಯತ್ ಕಾಲ
ಡಿ. ಭೂತ ಕಾಲ

44. ಕೆಳಗಿನ ಸಾಲನ್ನು ಪೂರ್ಣಗೊಳಿಸಿ
ತೊಳ ಹಳ್ಳಕ್ಕೆ ಬಿದ್ದರೆ ಆಳಿಗೊಂದು ...........
ಎ. ಏಟು ಬಿ. ಕಲ್ಲು
ಸಿ. ಹುಲ್ಲು ಡಿ. ಹಲ್ಲು

45. ಈ ಕೆಳಗಿನ ಹೆಸರಿನ ಶುದ್ಧರೂಪ ಯಾವುದು?
ಎ. ಪುಲಿಕೇಶಿ ಬಿ. ಪುಲಿಖೇಶಿ
ಸಿ. ಹುಲಿಕೇಶಿ ಡಿ. ಪುಲಕೇಶಿ

46. ಇವುಗಳಲ್ಲಿ ಯಾವುದು ಗ್ರಾಂಥಿಕ ರೂಪ ಗುರುತಿಸಿ
ಎ. ಹೋಗುತ್ತದೆ ಬಿ. ತಂಗ್ಯವ್ವ
ಸಿ. ಬರುತ್ತೈತೆ ಡಿ. ಹಂಗಾರೆ

47. ಕಾಗುಣಿತದ ಸರಿಯಾದ ರೂಪವನ್ನು ಗುರುತಿಸಿ
ಎ. ಶುಬಾಶಯ ಬಿ. ಷುಬಾಶಯ
ಸಿ. ಷುಭಾಶಯ ಡಿ. ಶುಭಾಷಯ

48. ಸಂಬಂಧವಿಲ್ಲದ ಸಂಖ್ಯೆಯನ್ನು ಪತ್ತೆ ಹಚ್ಚಿ
5, 10, 17, 24
ಎ. 24 ಬಿ. 5
ಸಿ. 10 ಡಿ. 17

49. Complete the following proverb : "A stitch in time ________ "

50. ಅಂತರ ರಾಷ್ಟ್ರೀಯ ದಿನ ರೇಖೆ ಈ ಮೂಲಕ ಸಾಗುತ್ತದೆ.
ಎ. ಗಿಬ್ರಾಲ್ಟರ್ ಜಲಸಂಧಿ
ಬಿ. ಫ್ಲೋರಿಡಾ ಜಲಸಂಧಿ
ಸಿ. ಮಲಕ್ಕ ಜಲಸಂಧಿ
ಡಿ. ಬೇರಿಂಗ್ ಜಲಸಂಧಿ

51. She was sitting ______ him in the park.
A. beside B. besides
C. aside D. alongside
A. beside B. besides
C. aside D. alongside

52. ಈ ಕೆಳಗಿನವುಗಳಲ್ಲಿ ಯಾವುದು ಸಮಾನಾರ್ಥಕ ಪದವಲ್ಲ?
ಎ. ಅರಸ, ದೊರೆ, ನೃಪ
ಬಿ. ಗಾಳಿ, ಅನಲ, ಅಗ್ನಿ
ಸಿ. ಕೈ, ಕರ, ಹಸ್ತ
ಡಿ. ಅಣ್ಣ, ಸಹೋದರ, ಭ್ರಾತೃ


ತಕ್ಷಣ ಬೇಕಾಗಿದ್ದಾರೆ.
B-INSPIRE BRANCH
ತುಮಕೂರು ವಿಭಾಗಕ್ಕೆ ಕ್ರಿಯಾಶೀಲ ಯುವಕರು ಬೇಕಾಗಿದ್ದಾರೆ.
Age: 18-28
Earn : 8,000-16,000/- P.M.
10th, PUC, ಯಾವುದೇ Degree.
ಗ್ರಾಮೀಣ ಅಭ್ಯರ್ಥಿಗಳಿಗೆ ಆದ್ಯತೆ.
ಉಚಿತ ತರಬೇತಿ, ವಸತಿ,
9980487857
0816-2291755
ಜಾಹೀರಾತು


53. One of my _____ is to be honest.
A. Principle
B. Principles
C. Principled
D. Principal

54. 'ಉರಿಯುವ ಬೆಂಕಿಗೆ ತುಪ್ಪ ಸುರಿ' ಎಂದರೆ
ಎ. ಬೆಂಕಿಗೆ ತುಪ್ಪವನ್ನು ಸುರಿಯುವುದು
ಬಿ. ಒಲೆಗೆ ತುಪ್ಪ ಸುರಿಯುವುದು
ಸಿ. ಒಲೆಗೆ ಉರಿ ಹಾಕುವುದು
ಡಿ. ಕೋಪವನ್ನು ಪ್ರಚೋದಿಸುವುದು

55. ಶೇಕ್ಸ್‌ಪಿಯರ್‌ನ ಈ ಕೆಳಕಂಡ ಕೃತಿಯಲ್ಲಿ ಬ್ರೂಟಸ್' ಪಾತ್ರ ಬರುತ್ತದೆ.
ಎ. ಮರ್ಚೆಂಟ್ ಆಫ್ ವೆನೀಸ್
ಬಿ. ಜ್ಯೂಲಿಯಸ್ ಸೀಸರ್
ಸಿ. ಒಥೆಲೊ
ಡಿ. ಹ್ಯಾಮ್ಲೆಟ್

56. He works ________ Citi Bank, Chennai but his family lives ________ Delhi.
A. at, on B. on, at
C. at, in D. in, at

57. ಭಾರತದಲ್ಲಿ ಒಂದು ರಾಜ್ಯದ ಮೊದಲ ಮಹಿಳಾ ರಾಜ್ಯಪಾಲರಾಗಿ ನೇಮಕವಾದ ಮಹಿಳೆ
ಎ. ಸುಚೇತ ಕೃಪಲಾನಿ
ಬಿ. ಇಂದಿರಾಗಾಂಧಿ
ಸಿ. ಸರೋಜಿನಿ ನಾಯ್ಡು
ಡಿ. ವಿಜಯಲಕ್ಷ್ಮಿ ಪಂಡಿತ್

58. ಈ ಕೆಳಗಿನ ಸಾಲುಗಳಲ್ಲಿ ಸರಿಯಾದ ಸಾಲನ್ನು ಗುರುತಿಸಿ
ಎ. ಅನ್ನ ಬಲ್ಲವನಿಗೆ ರೋಗವಿಲ್ಲ, ಮಾತು ಬಲ್ಲವನಿಗೆ ಜಗಳವಿಲ್ಲ
ಬಿ. ನೋಟ ಬಲ್ಲವನಿಗೆ ರೋಗವಿಲ್ಲ, ಆಟ ಬಲ್ಲವನಿಗೆ ಜಗಳವಿಲ್ಲ
ಸಿ. ಊಟ ಬಲ್ಲವನಿಗೆ ರೋಗವಿಲ್ಲ, ಮಾತು ಬಲ್ಲವನಿಗೆ ಜಗಳವಿಲ್ಲ
ಡಿ. ಊಟ ಬಲ್ಲವನಿಗೆ ರೋಗವಿಲ್ಲ, ಮಾತು ಬಾರದವನಿಗೆ ಜಗಳವಿಲ್ಲ

59. Kashmiri customs, food and marriage ______ different.
A. are B. or
C. was D. is

60. In a sentence, we usually pair "neither' wiht
A. eigher B. or
C. even D. nor

61. A written accounts of the life of an individual :
A. novel B. epigraph
C. autobiography D. biography

62. 'ಮೈ ಕಂಟ್ರಿ ಅಂಡ್ ಮೈ ಲೈಫ್' ಈ ಪುಸ್ತಕದ ಲೇಖಕರು
ಎ. ಎಲ್.ಕೆ. ಅಡ್ವಾನಿ
ಬಿ. ಖುಶ್ವಂತ್ ಸಿಂಗ್
ಸಿ. ಕುಲದೀಪ್ ನಯ್ಯರ್
ಡಿ. ನೀರದ್ ಸಿ. ಚೌಧರಿ

63. The little girl tried to _____ her brother when he broke his toy.
A. condone
B. compensate
C. condole
D. console

64. ಕೆಳಗಿನವುಗಳಲ್ಲಿ ಯಾವುದು ಅರಿಸಮಾಸಕ್ಕೆ ಉದಾಹರಣೆ ?
ಎ. ಅರಸುಕುಮಾರ ಬಿ. ಕುಸುಮಬಾಲೆ
ಸಿ. ಸೂರ್ಯಕಿರಣ ಡಿ. ಅರಗಿಳಿ

65. The boy ______ his mother that he would certainly do well in the examination.
A. assured B. swore
C. guaranteed D. ensured

66. 'ಇನ್ ಕಿಲಾಬ್ ಜಿಂದಾಬಾದ್' ಈ ಘೋಷಣೆ ಯನ್ನು ಪ್ರಪ್ರಥಮವಾಗಿ ಮಾಡಿದವರು
ಎ. ಚಂದ್ರಶೇಖರ ಆಜಾದ್
ಬಿ. ವೀರ್ ಸಾವರ್ಕರ್
ಸಿ. ಭಗತ್ ಸಿಂಗ್
ಡಿ. ಲೋಕಮಾನ್ಯ ತಿಲಕ್

67. I ____ you on this issue.
A. agree with
B. agreed on
C. agree to
D. agree about

68. ಪಂಚಭೂತಗಳಲ್ಲಿ ಒಂದಾದ ಅಪ್ (ಅಪ್ಪು) ಪದದ ಅರ್ಥವೇನು ?
ಎ. ಜಲ ಬಿ. ಅಗ್ನಿ
ಸಿ. ಭೂಮಿ ಡಿ. ಆಕಾಶ

69. 'ಸ್ವದೇಶಿ' ಈ ಪದದ ವಿರುದ್ಧ ಪದ ಗುರುತಿಸಿ
ಎ. ಹೊರದೇಸಿ ಬಿ. ದೇಸಿ
ಸಿ. ವಿದೇಶಿ ಡಿ. ಪರದೇಶಿ

70. ಭಾರತದಲ್ಲಿ ಅಂತರರಾಷ್ಟ್ರೀಯ ಚಲನಚಿತ್ರೋತ್ಸವವು ಸಾಮಾನ್ಯವಾಗಿ ಈ ಸ್ಥಳದಲ್ಲಿ ನಡೆಯುತ್ತದೆ.
ಎ. ಬೆಂಗಳೂರು ಬಿ. ಮುಂಬಯಿ
ಸಿ. ಹೈದರಾಬಾದ್ ಡಿ. ಗೋವಾ

71. 'ರಚನೆ' ಪದದ ವಿರುದ್ಧಾರ್ಥಕ ಪದವನ್ನು ಗುರುತಿಸಿ
ಎ. ಸುರಚನೆ ಬಿ. ಅರಚನೆ
ಸಿ. ನಿರಚನೆ ಡಿ. ವಿರಚನೆ

72. ವಿದ್ಯುತ್ ಹರಿಯಲು ಉತ್ತಮ ವಾಹಕ
ಎ. ಕಡಿಮೆ ಉಷ್ಣತೆಯಲ್ಲಿರುವ ಶೋಧಿಸಿದ ನೀರು
ಬಿ. ಉಪ್ಪು ನೀರು
ಸಿ. ಬಟ್ಟೀಕರಿಸಿದ ನೀರು
ಡಿ. ಹೆಚ್ಚು ಉಷ್ಣತೆಯಲ್ಲಿರುವ ಶೋಧಿಸಿದ ನೀರು

73. ಈ ಗಾದೆ ಮಾತನ್ನು ಪೂರ್ಣಗೊಳಿಸಿ
ಅಂಗೈ ಹುಣ್ಣಿಗೆ..............
ಎ. ಕೈ ಬೇಕೆ ? ಬಿ. ಕನ್ನಡಕ ಬೇಕೆ ?
ಸಿ. ಕಣ್ಣು ಬೇಕೆ ? ಡಿ. ಕನ್ನಡಿ ಬೇಕೆ ?

74. 'ಗ್ರೀನ್ ಪಾರ್ಕ್' ಸ್ಟೇಡಿಯಂ ಇರುವ ಸ್ಥಳ
ಎ. ಹೈದರಾಬಾದ್ ಬಿ. ಚೆನ್ನೈ
ಸಿ. ಕಾನ್ಪುರ ಡಿ. ದೆಹಲಿ

75. You _________ what the problem is
A. none B. know
C. now D. no

76. ಗುಣಪದಕ್ಕೆ ಉದಾಹರಣೆ ಯಾವುದು?
ಎ. ಮಲ್ಲಿಗೆ ಬಿ. ಜಾಜಿ
ಸಿ. ಸಂಪಿಗೆ ಡಿ. ಕೆಂಪು ಗುಲಾಬಿ

77. The family refused to _____ any financial support.
A. expect B. except
C. accept D. aspect

78. 'ಹಾಫ್ ಗರ್ಲ್ ಫ್ರೆಂಡ್' ಎಂಬ ಪುಸ್ತಕವನ್ನು ಬರೆದ ಪ್ರಮುಖ ಭಾರತೀಯ ಇಂಗ್ಲೀಷ್ ಸಾಹಿತಿ
ಎ. ಸ್ವರಾಜ್ ಪಾಲ್ ಬಿ. ಅಮಿತವ ಘೋಷ್
ಸಿ. ಚೇತನ್ ಭಗತ್ ಡಿ. ಮಂಜು ಕಪೂರ್

79. ಉಷ್ಣ ನಿರೋಧಕ ಗಾಜು ಎಂದರೆ,
ಎ. ಫ್ಲಿಂಟ್ ಗಾಜು ಬಿ. ಒರಟು ಗಾಜು
ಸಿ. ಪೈರೆಕ್ಸ್ ಗಾಜು ಡಿ. ಬಾಟಲ್ ಗಾಜು

80. ಮಾನವನ ದೇಹದ ಅತೀ ಚಿಕ್ಕದಾದ ಮೂಳೆ
ಎ. ಫಿಮರ್ ಬಿ. ಸ್ಟೆಪಿಸ್
ಸಿ. ಟಿಬಿಯ ಡಿ. ತಲೆಬರುಡೆ

81. ಸಂಗ್ರಹಿಸಿದ ದತ್ತಾಂಶ (ಡೇಟಾ)ವನ್ನು ಒಂದು ವಿಶೇಷವಾದ ಹೆಸರಿನಿಂದ ಶೇಖರಿಸಿದೆ,
ಎ. ಡೇಟಾಬೇಸ್ ಬಿ. ಡೈರೆಕ್ಟರಿ
ಸಿ. ಫೈಲ್ ಡಿ. ಫೋಲ್ಡರ್

82. I was caught in _______ awful traffic jam in the morning.
A. the B. some
C. a D. an

83. The _____ export rose steeply.
A. countries B. countries
C. countrys D. country's

84. ಈ ಕೆಳಗಿನ ಪದಗಳಲ್ಲಿ ಯಾವುದು ಕಾಗುಣಿತ ತಪ್ಪಿರುವ ರೂಪ ಗುರುತಿಸಿ
ಎ. ಪ್ರತ್ಯಕ್ಷ ಬಿ. ತಂಭಾಳಿ
ಸಿ. ವಿಸ್ಮಯ ಡಿ. ಪರೋಕ್ಷ

85. The correct order is :
a. a beauty asset b. the skin
c. more than d. is much
A) a b a d
B) d b c a
C) b d c a
D) c b d a

86. Oak _______ remain on the trees through the fall and into the winter.
A. leafs B. leaves
C. leaf D. lives

87. 'ಬೀಳು' ಈ ಪದದ ವಿರುದ್ಧಾರ್ಥಕ ಪದ ಬರೆಯಿರಿ
ಎ. ಪಾಳು ಬಿ. ಹಾಳು
ಸಿ. ಕೇಳು ಡಿ. ಬೀಳು

88. ಗುಂಪಿಗೆ ಸೇರದ ಪದವನ್ನು ಗುರುತಿಸಿ
ಎ. ಆಕಾಶ, ನಭ, ಬಾನು, ಧರೆ
ಬಿ. ಆಕಾಶ, ನಭ, ಭಾನು, ಭುವಿ
ಸಿ. ಆಕಾಶ, ನಭ, ಭಾನು, ಆಗಸ
ಡಿ. ಆಕಾಶ, ನಭ, ಭಾನು, ಇಳೆ

89. ಅಮೇರಿಕಾದ 'ಆಪಲ್' ಕಂಪನಿಯು ಸಹ ಭಾಗಿತ್ವದ ಒಪ್ಪಂದ ಮಾಡಿಕೊಳ್ಳಲು ಸಿದ್ಧವಿರುವ ಕಂಪನಿ
ಎ. ಏರ್‌ಟೆಲ್ ಬಿ. ಜಿಯೊ
ಸಿ. ಐಡಿಯಾ ಡಿ. ವೊಡಫೋನ್

90. The temperature in Srinagar is _____ degrees for the past ten days.
A. beneath B. below
C. under D. down

91. Life is full of ups and downs, so we have to learn to take failures _____ a smile.
A. by B. at
C. with D. for

92. _____ clothing is better for exerciese.
A. Last B. Lost
C. Lose D. Loose

93. ಸಂವಿಧಾನ ರಚನಾ ಸಭೆಯ ಪ್ರಾರಂಭಿಕ ಸಭೆಯ ಅಧ್ಯಕ್ಷತೆ ವಹಿಸಿದ್ದವರು
ಎ. ಬಿ.ಆರ್. ಅಂಬೇಡ್ಕರ್
ಬಿ. ಡಾ. ರಾಜೇಂದ್ರ ಪ್ರಸಾದ್
ಸಿ. ಪಿ. ಉಪೇಂದ್ರ
ಡಿ. ಸಚ್ಚಿದಾನಂದ ಸಿನ್ಹಾ

94. ಕೆಳಗಿನ ವಾಕ್ಯದಲ್ಲಿನ ಕಾಗುಣಿತದ ದೋಷವನ್ನು ಕಂಡುಕೊಂಡು ಸರಿಯಾದ ಉತ್ತರವನ್ನು ಗುರುತಿಸಿ
ಎ. ಉಳ್ಳವರು ಶಿವಾಲಯವ ಮಾಡುವರು
ಬಿ. ಉಳ್ಳವರು ಶಿವಾಲಯವ ಮಾಡುವರು
ಸಿ. ಹುಳ್ಳವರು ಶಿವಾಲಯವ ಮಾಡುವರು

ಡಿ. ಉಳವರು ಷಿವಾಲಯವ ಮಾಡುವರು

95. Pick out the wrong plural from the following.
A. mangos
B. grapes
c. tomatoes
D. potatoes

96. 'ಹಿತ್ತಾಳೆ ಕಿವಿ' ಎಂಬ ನುಡಿಗಟ್ಟಿನ ಧ್ವನ್ಯಾರ್ಥ
ಎ. ಹಿರಿದಾದ ಕಿವಿ
ಬಿ. ಹಿತ್ತಾಳೆ ಲೋಹದಿಂದ ಮಾಡಿದ ಕಿವಿ
ಸಿ. ಕಿವಿಯಲ್ಲಿ ಶಬ್ದ
ಡಿ. ಚಾಡಿ ಮಾತನ್ನು ಕೇಳುವುದು

97. The only definite article in English is
A. a B. the
C. an D. some

98. Ram is ______ than Lakshman.
A. older B. old
C. oldest D. eldest

99. Newton ____ gravity.
A. invented
B. discovered
C. researched
D. found

100. ಈ ಸಾಮ್ರಾಜ್ಯಗಳ ಸರಿಯಾದ ಕಾಲಾನುಕ್ರಮಣಿಕೆಯನ್ನು ಗುರುತಿಸಿ
ಎ. ಮೌರ್ಯರು-ಶುಂಗರು-ಕುಶಾನರು-ಗುಪ್ತರು
ಬಿ. ಶುಂಗರು-ಮೌರ್ಯರು-ಗುಪ್ತರು-ಕುಶಾನರು
ಸಿ. ಮೌರ್ಯರು-ಶುಂಗರು-ಗುಪ್ತರು-ಕುಶಾನರು
ಡಿ. ಕುಶಾನರು-ಗುಪ್ತರು-ಶುಂಗರು-ಮೌರ್ಯರು

## ಉತ್ತರಗಳು

| | | | |
|---|---|---|---|
| 1-ಸಿ | 26-ಬಿ | 51-ಎ | 76-ಡಿ |
| 2-ಬಿ | 27-ಸಿ | 52-ಬಿ | 77-ಸಿ |
| 3-ಎ | 28-ಡಿ | 53-ಬಿ | 78-ಸಿ |
| 4-ಎ | 29-ಡಿ | 54-ಡಿ | 79-ಸಿ |
| 5-ಬಿ | 30-ಡಿ | 55-ಬಿ | 80-ಬಿ |
| 6-ಬಿ | 31-ಬಿ | 56-ಸಿ | 81-ಎ |
| 7-ಸಿ | 32-ಎ | 57-ಸಿ | 82-ಎ |
| 8-ಸಿ | 33-ಸಿ | 58-ಸಿ | 83-ಡಿ |
| 9-ಬಿ | 34-ಸಿ | 59-ಡಿ | 84-ಬಿ |
| 10-ಸಿ | 35-ಎ | 60-ಡಿ | 85-ಸಿ |
| 11-ಎ | 36-ಡಿ | 61-ಡಿ | 86-ಬಿ |
| 12-ಸಿ | 37-ಡಿ | 62-ಎ | 87-★ |
| 13-ಡಿ | 38-ಸಿ | 63-ಡಿ | 88-ಸಿ |
| 14-ಡಿ | 39-ಡಿ | 64-ಡಿ | 89-ಬಿ |
| 15-ಸಿ | 40-ಡಿ | 65-ಎ | 90-ಬಿ |
| 16-ಸಿ | 41-ಎ | 66-ಎ | 91-ಸಿ |
| 17-ಬಿ | 42-ಬಿ | 67-ಎ | 92-ಡಿ |
| 18-ಎ | 43-ಡಿ | 68-ಎ | 93-ಡಿ |
| 19-ಡಿ | 44-ಬಿ | 69-ಸಿ | 94-ಬಿ |
| 20-ಡಿ | 45-ಡಿ | 70-ಡಿ | 95-ಎ |
| 21-ಸಿ | 46-ಎ | 71-ಬಿ | 96-ಡಿ |
| 22-ಎ | 47-ಡಿ | 72-ಸಿ | 97-ಬಿ |
| 23-ಎ | 48-ಎ | 73-ಡಿ | 98-ಎ |
| 24-ಡಿ | 49-ಸಿ | 74-ಸಿ | 99-ಬಿ |
| 25-ಎ | 50-ಡಿ | 75-ಬಿ | 100-ಎ |

# ದಿನಾಂಕ 29-1-2017ರಂದು ನಡೆದ ಪಿಡಿಓ ಮತ್ತು ಸೆಕ್ರೆಟರಿ ಗ್ರೇಡ್-1 ಸ್ಪರ್ಧಾತ್ಮಕ ಪರೀಕ್ಷೆಯ

PAPER-2

# KEY ANSWERS

**Rural Development and Panchayath Raj-Karnataka Grama Swaraj and Panchayath Raj Act 1993 and Rules with Amendments**

1. ಅಕ್ಟೋಬರ್ 2016ರ ವರೆಗೆ ಎಂಜಿಎನ್ ಆರ್‌ಇಜಿ ಕಾಯ್ದೆಯಡಿಯಲ್ಲಿ ವಿತರಿಸಲಾದ/ನೀಡಲಾದ ಒಟ್ಟು ಉದ್ಯೋಗ ಚೀಟಿಗಳ ಸಂಖ್ಯೆಯು
ಎ. 12.80 ಕೋಟಿಗಳು
ಬಿ. 12.70 ಕೋಟಿಗಳು
ಸಿ. 12.58 ಕೋಟಿಗಳು
ಡಿ. 12.67 ಕೋಟಿಗಳು

2. ಸ್ವತಂತ್ರ ಭಾರತದಲ್ಲಿ ಗ್ರಾಮ ಸ್ವರಾಜ್ ಎಂಬ ಪರಿಕಲ್ಪನೆಯನ್ನು ಪ್ರತಿಪಾದಿಸಿದವರು ಯಾರೆಂದೆ,
ಎ. ಬಿ.ಆರ್.ಅಂಬೇಡ್ಕರ್
ಬಿ. ಜವಾಹರ ಲಾಲ್ ನೆಹರು
ಸಿ. ಎಂ.ಕೆ.ಗಾಂಧಿ
ಡಿ. ಸರ್ದಾರ್ ವಲ್ಲಭಭಾಯ್ ಪಟೇಲ್

3. ಗ್ರಾಮ ಸಭೆಯ ಸದಸ್ಯರಾಗಲು ಒಬ್ಬ ವ್ಯಕ್ತಿಯು .......... ವಯಸ್ಸು ಹೊಂದಬೇಕು.
ಎ. ಹದಿನಾರು ವರ್ಷಗಳು
ಬಿ. ಹದಿನೇಳು ವರ್ಷಗಳು
ಸಿ. ಹದಿನೈದು ವರ್ಷಗಳು
ಡಿ. ಹದಿನೆಂಟು ವರ್ಷಗಳು

4. ಕೆಳಗಿನವುಗಳಲ್ಲಿ ಯಾವುದು ಗ್ರಾಮ ಪಂಚಾಯತಿಯ ಪ್ರಾಥಮಿಕ ಕಾರ್ಯ ಅಲ್ಲ?
ಎ. ಬೀದಿ ದೀಪಗಳ ನಿರ್ವಹಣೆ
ಬಿ. ಕುಡಿಯುವ ನೀರಿನ ಪೂರೈಕೆ
ಸಿ. ಜನನ ಮತ್ತು ಮರಣಗಳ ನೋಂದಣಿ
ಡಿ. ಪರಿಸರ ಸಂರಕ್ಷಣೆ

5. 1992ರಲ್ಲಿ ............ರ ಸರ್ಕಾರವಿದ್ದಾಗ ಪಂಚಾಯತ್ ರಾಜ್ ಕಾಯ್ದೆಯು ಅಂಗೀಕಾರವಾಯಿತು.
ಎ. ನರೇಂದ್ರ ಮೋದಿ ಬಿ. ನರಸಿಂಹ ರಾವ್
ಸಿ. ಇಂದಿರಾ ಗಾಂಧಿ ಡಿ. ರಾಜೀವ್ ಗಾಂಧಿ

6. ಗ್ರಾಮ ಪಂಚಾಯತಿಯನ್ನು ವಿಸರ್ಜಿಸುವ ಅಧಿಕಾರವು ಈ ಕೆಳಗಿನ ಯಾರಿಗೆ ಇದೆ?
ಎ. ಡೆಪ್ಯುಟಿ ಕಮೀಷನರ್
ಬಿ. ಅಸಿಸ್ಟೆಂಟ್ ಕಮೀಶನರ್
ಸಿ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
ಡಿ. ಜಿಲ್ಲಾ ಪಂಚಾಯತ್

7. ಸಂವಿಧಾನದ ಯಾವ ಭಾಗವು ಪಂಚಾಯತಿಗಳ (ವಹಿವಾಟೀನ) ಬಗೆಗಿನ ವಿವರಗಳನ್ನು ಒಳಗೊಂಡಿದೆ?
ಎ. ಭಾಗ VIII ಬಿ. ಭಾಗ X
ಸಿ. ಭಾಗ IX ಡಿ. ಭಾಗ XI

8. ಗ್ರಾಮ ಪಂಚಾಯತಿಯ ಸದಸ್ಯತ್ವದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಇತರೆ ಹಿಂದುಳಿದ ವರ್ಗಗಳು ಹಾಗೂ ಮಹಿಳೆಯರಿಗೆ ನೀಡಲಾದ ಮೀಸಲಾತಿಯ ಪ್ರಮಾಣವು.................. ನ್ನು ಮೀರಬಾರದು
ಎ. 50% ಬಿ. 67%
ಸಿ. 33% ಡಿ. 75%

9. AAY stands for/AAY ಎಂದರೆ
ಎ. ಅಟಲ್ ಆರೋಗ್ಯ ಯೋಜನೆ
ಬಿ. ಅಂಬೇಡ್ಕರ್ ಆರೋಗ್ಯ ಯೋಜನೆ
ಸಿ. ಅಟಲ್ ಆಶ್ರಯ ಯೋಜನೆ
ಡಿ. ಅಂತ್ಯೋದಯ ಅನ್ನ ಯೋಜನೆ

10. ಪಂಚಾಯತ್ ಚುನಾವಣೆಗಳಲ್ಲಿ ಚುನಾವಣಾ ಕ್ಷೇತ್ರಗಳನ್ನು ನಿಗದಿಪಡಿಸುವಾಗ ಪರಿಗಣಿಸುವ ಜನಸಂಖ್ಯೆಯ ಆಧಾರವು
ಎ. ಚುನಾವಣೆ ನಡೆಯುವ ಅವಧಿಯ ತಕ್ಷಣದ ಹಿಂದೆ ಜರುಗಿದ ಜನಗಣತಿಯು ನೀಡಿದ ಜನಸಂಖ್ಯೆ
ಬಿ. ಡೆಪ್ಯುಟಿ ಕಮೀಷನರ್‌ರವರು ಅಂದಾಜಿಸುವ ಜನಸಂಖ್ಯೆ
ಸಿ. ಜನಗಣತಿ ಆಯುಕ್ತರು ಅಂದಾಜಿಸಿದ ಜನಸಂಖ್ಯೆ
ಡಿ. 2001ರ ಜನಗಣತಿ

11. ಗ್ರಾಮೀಣ ಪ್ರದೇಶದಲ್ಲಿ ಪೂರೈಸಬೇಕಾದ ಕುಡಿಯುವ ನೀರಿನ ಕನಿಷ್ಠ ಪ್ರಮಾಣವನ್ನು ದಿನವೊಂದಕ್ಕೆ........... ಎಂದು ನಿಗದಿಪಡಿಸಲಾಗಿದೆ.
ಎ. ತಲಾ ಐವತ್ತೈದು ಲೀಟರುಗಳು
ಬಿ. ತಲಾ ನಲ್ವತ್ತು ಲೀಟರುಗಳು
ಸಿ. ತಲಾ ಅರವತ್ತು ಲೀಟರುಗಳು
ಡಿ. ತಲಾ ಐವತ್ತು ಲೀಟರುಗಳು

12. ಗ್ರಾಮ ಪಂಚಾಯತಿಯಲ್ಲಿ ನೈರ್ಮಲ್ಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವವರು
ಎ. ಅಭಿವೃದ್ಧಿ ಸಮಿತಿ
ಬಿ. ಸೌಕರ್ಯ ಸಮಿತಿ
ಸಿ. ಉತ್ಪಾದನಾ ಸಮಿತಿ
ಡಿ. ಸಾಮಾಜಿಕ ನ್ಯಾಯ ಸಮಿತಿ

13. ಗ್ರಾಮ ಪಂಚಾಯತಿಯ ಜಲಗಾರ (ವಾಟರ್ ಮ್ಯಾನ್) ಹುದ್ದೆಗೆ ಕನಿಷ್ಠ ಶೈಕ್ಷಣಿಕ ಅರ್ಹತೆಯು
ಎ. 10ನೇ ತರಗತಿ ತೇರ್ಗಡೆ
ಬಿ. ಪಿಯುಸಿ ತೇರ್ಗಡೆ
ಸಿ. ಪದವಿ ತೇರ್ಗಡೆ
ಡಿ. 7ನೆಯ ತರಗತಿ ತೇರ್ಗಡೆ

14. 2011ರ ಜನಗಣತಿಯ ವಾಸಿಸುವ ಜನರ ಪ್ರತಿಶತ ಪ್ರಮಾಣವು
ಎ. 62.4 ಬಿ. 60.4
ಸಿ. 63.4 ಡಿ. 61.4

15. ಪಂಚಾಯತ್ ರಾಜ್ ಕಾಯ್ದೆಯು ಈ ಕೆಳಗಿನ ಯಾವುಗಳನ್ನು ನೀಡಿದೆ?
i. ಪ್ರತಿ ಐದು ವರ್ಷಗಳಿಗೆ ಚುನಾವಣೆ
ii. ಪಂಚಾಯತಿಗಳಿಗೆ ತೆರಿಗೆ ವಿದಿಸುವ ಅಧಿಕಾರಿ
iii. ಮಹಿಳೆಯರಿಗೆ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಮೀಸಲಾತಿ
ಕೆಳಗಿನವುಗಳ ಪೈಕಿ ಆಯ್ಕೆ ಮಾಡಿರಿ
ಎ. i ಮತ್ತು iii ಮಾತ್ರ
ಬಿ. i ಮತ್ತು ii ಮಾತ್ರ
ಸಿ. i, ii. ಮತ್ತು iii
ಡಿ. ii ಮತ್ತು iii ಮಾತ್ರ

16. ಅಬ್ದುಲ್ ನಜೀರ್ ಸಾಬ್ ಗ್ರಾಮೀಣಾಬಿವೃದ್ಧಿ ಸಂಸ್ಥೆಯವರು ರಚಿಸಿದ ಗ್ರಾಮ ಪಂಚಾಯಿತಿ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಬಳಸಿದ ಆಯಾಮಗಳೆಂದರೆ,
ಎ. ಶಿಕ್ಷಣ, ಆರೋಗ್ಯ, ಆದಾಯ
ಬಿ. ಶಿಕ್ಷಣ, ಉದ್ಯೋಗ, ಆದಾಯ
ಸಿ. ಆದಾಯ, ಆರೋಗ್ಯ, ಉದ್ಯೋಗ
ಡಿ. ಆರೋಗ್ಯ, ವಯಸ್ಸು, ಉದ್ಯೋಗ

17. ಕೆಳಗಿನ ಯಾವುದು ಗ್ರಾಮ ಸ್ವರಾಜ್‌ನ ಅಂಗವಲ್ಲ?
ಎ. ವಾರ್ಡ್ ಸಭಾ ಬಿ. ಗ್ರಾಮ ಸಭಾ
ಸಿ. ಜನವಸತಿ ಸಭಾ ಡಿ. ಸಾಮಾನ್ಯ ಸಭೆ

18. ರಾಜ್ಯ ಹಣಕಾಸು ಆಯೋಗವನ್ನು ರಚಿಸುವವರು
ಎ. ರಾಜ್ಯ ಸರ್ಕಾರ
ಬಿ. ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಚಿವರು
ಸಿ. ಮುಖ್ಯಮಂತ್ರಿಗಳು
ಡಿ. ರಾಜ್ಯಪಾಲ

19. ಪಂಚಾಯತಿ ಯೋಜನೆಗಳ ಅನುಷ್ಠಾನದ ಸಂದರ್ಭದಲ್ಲಿ ಕೆಲಗಿನ ಯಾವ ಸಮೂಹವನ್ನು ಸಾಮಾಜಿಕವಾಗಿ ಸುರಕ್ಷಿತವಲ್ಲದ ಸಮೂಹವೆಂದು ಪರಿಗಣಿಸಲ್ಪಡುತ್ತದೆ?
ಎ. ಸಾಕ್ಷರರಲ್ಲದವರು
ಬಿ. ನಿರುದ್ಯೋಗಿಗಳು
ಸಿ. ಮಧ್ಯದಲ್ಲಿ ಶಾಲೆ ಬಿಟ್ಟವರು
ಡಿ. ವಲಸಿಗರು

20. ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ಮೀಸಲಾತಿ ಎಂಬುದು ...... ನ್ನು ಖಾತರಿಪಡಿಸಲು ಉದ್ದೇಶಿಸುತ್ತದೆ.
ಎ. ಲಿಂಗಾಭಿವೃದ್ಧಿ
ಬಿ. ಸಾರ್ವಜನಿಕ ಜೀವನದಲ್ಲಿ ಮಹಿಳೆಯರ ಭಾಗವಹಿಸುವಿಕೆ
ಸಿ. ಮಹಿಳೆಯ ಆರ್ಥಿಕ ಕಲ್ಯಾಣ
ಡಿ. ಶಿಕ್ಷಣದ ಅಭಿವೃದ್ಧಿ

21. ಐದು ವರ್ಷದ ಅವಧಿಯ ನಂತರ ಜಿಲ್ಲಾ ಪಂಚಾಯತಿಯ ಹಣಕಾಸು ಪರಿಸ್ಥಿತಿಯನ್ನು ಪರಿಶೀಲಿಸುವವರು:
ಎ. ಹಣಕಾಸು ಆಯೋಗ
ಬಿ. ಲೆಕ್ಕಪರಿಶೋಧಕರು
ಸಿ. ರಾಜ್ಯ ಸರ್ಕಾರ
ಡಿ. ಜಿಲ್ಲಾ ಪಂಚಾಯತಿಯ ಆಡಳಿತ ಮಂಡಳಿ

22. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993ರ ಯಾವ ಸೆಕ್ಷನ್ ಅಡಿಯಲ್ಲಿ ಗ್ರಾಮ ಪಂಚಾಯಿತಿಗಳು ವಿಧಿಸಬಹುದಾದ ತೆರಿಗೆ ಮತ್ತು ದರಗಳನ್ನು ಪರಿಷ್ಕರಣೆಗೆ ಅವಕಾಶ ಮಾಡಲ್ಪಟ್ಟಿದೆ.
ಎ. 199-A ಅನುಸೂಚಿ I
ಬಿ. 199-A ಅನುಸೂಚಿ IV
ಸಿ. 199-A ಅನುಸೂಚಿ II
ಡಿ. 199-A ಅನುಸೂಚಿ V

23. ಗ್ರಾಮ ಪಂಚಾಯಿತಿಯು ಯಾವುದಕ್ಕೆ ಉತ್ತರದಾಯಿಯಾಗಿರುತ್ತದೆ ?
ಎ. ಗ್ರಾಮ ಸಭಾ
ಬಿ. ಪಂಚಾಯತ್ ಸಮಿತಿ
ಸಿ. ಜಿಲ್ಲಾ ಪಂಚಾಯತ್
ಡಿ. ಸಿಇಓ

24. ಖರೀದಿಗಳಿಗೆ ಪಂಚಾಯತಿಗಳು ಟೆಂಡರ್ ಕರೆಯಬೇಕಾಗುತ್ತದೆ.
ಎ. ರೂ. 1,00,000 ಗಿಂತ ಅಧಿಕ
ಬಿ. ರೂ. 75,000 ಗಿಂತ ಅಧಿಕ
ಸಿ. ರೂ. 50,000 ಗಿಂತ ಅಧಿಕ
ಡಿ. ರೂ. 1,25,000 ಗಿಂತ ಅಧಿಕ

25. ಈ ಕೆಳಗಿನ ಯಾವ ಕಾರ್ಯಕ್ರಮಗಳನ್ನು ಗ್ರಾಮಪಂಚಾಯತಿಯ ಅನುಷ್ಠಾನಗೊಳಿಸುವುದಿಲ್ಲ?
ಎ. ಭಾಗ್ಯಜ್ಯೋತಿ ಯೋಜನೆ
ಬಿ. ರಾಷ್ಟ್ರೀಯ ವೃದ್ಧಾಪ್ಯ ವೇತನ ಯೋಜನೆ
ಸಿ. ಎಮ್‌ಜಿಎನಾರ್ ಇ ಜಿ ಎ
ಡಿ. ಇಂದಿರಾ ಆವಾಸ್ ಯೋಜನೆ

26. ಹದಿನಾಲ್ಕನೆಯ ಹಣಕಾಸು ಆಯೋಗದ ಶಿಫಾರಸ್ಸುಗಳು......... ಅವಧಿಗೆ ಅನ್ವಯು

**ವಾಗುತ್ತವೆ.**
ಎ. 2016 ರಿಂದ 2021
ಬಿ. 2015 ರಿಂದ 2020
ಸಿ. 2014 ರಿಂದ 2019
ಡಿ. 2013 ರಿಂದ 2018

**27. ಕೆಳಗಿನ ಯಾವ ಸಂಸ್ಥೆಗೆ ತೆರಿಗೆ ವಿಧಿಸುವ ಅಧಿಕಾರವಿರುತ್ತದೆ?**
ಎ. ಗ್ರಾಮ ಪಂಚಾಯಿತಿ
ಡಿ. ಗ್ರಾಮ ಸಭೆ
ಸಿ. ಜಿಲ್ಲಾ ಪಂಚಾಯಿತಿ
ಡಿ. ತಾಲ್ಲೂಕು ಪಂಚಾಯಿತಿ

**28. ಗ್ರಾಮ ಸ್ವರಾಜ್ ಎಂಬ ಪರಿಕಲ್ಪನೆಯನ್ನು ನೀಡಿದವರು ...........**
ಎ.ವೈ.ವಿ.ರೆಡ್ಡಿ
ಬಿ. ಬಲವಂತರಾಯ್ ಮೆಹ್ತಾ
ಸಿ. ಎಂ.ಕೆ.ಗಾಂಧಿ
ಡಿ. ಜಯಪ್ರಕಾಶ್ ನಾರಾಯಣ್

**29. ಗ್ರಾಮ ಪಂಚಾಯತ್‌ನಲ್ಲಿ ಇಬ್ಬರು ಅಭ್ಯರ್ಥಿಗಳು ಸಮಾನ ಮತಗಳನ್ನು ಪಡೆದಾಗ ಆಗ ಅಭ್ಯರ್ಥಿಯ ಆಯ್ಕೆಯಲ್ಲಿ ಅನುಸರಿಸಲಾಗುವ ಪದ್ಧತಿಯೆಂದರೆ,**
ಎ. ಮರು ಚುನಾವಣೆ
ಬಿ. ರಿಟರ್ನಿಂಗ್ ಆಫೀಸರ್ ಅವರ ನಿರ್ಧಾರದಂತೆ
ಸಿ. ಲಾಟರಿ ಮೂಲಕ
ಡಿ. ಡೆಪ್ಯುಟಿ ಕಮೀಷನರ್ ಅವರ ನಿರ್ಧಾರದಂತೆ

**30. ಒಬ್ಬ ಚುನಾಯಿತ ಪ್ರತಿನಿಧಿಯು ತನ್ನ ಚುನಾವಣಾ ವೆಚ್ಚಗಳ ವಿವರವನ್ನು ಯಾರಿಗೆ ಸಲ್ಲಿಸುತ್ತಾನೆ/ಳೆ?**
ಎ. ಡೆಪ್ಯುಟಿ ಕಮೀಷನರ್
ಬಿ. ರಿಟರ್ನಿಂಗ್ ಅಧಿಕಾರಿ
ಸಿ. ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ
ಡಿ.ರಾಜ್ಯ ಚುನಾವಣಾ ಆಯುಕ್ತರು

**31. ಯಾವುದಾದರೂ ಕಾರಣಕ್ಕಾಗಿ ಒಂದು ತಾಲ್ಲೂಕು ಪಂಚಾಯಿತಿ ಸಮಿತಿಯು ವಿಸರ್ಜಿಸಲ್ಪಟ್ಟರೆ .............. ತಿಂಗಳೊಳಗೆ ಮರು ಚುನಾವಣೆಯು ನಡೆಯತಕ್ಕದ್ದು.**
ಎ. ಎರಡು ಬಿ. ಮೂರು
ಸಿ. ಐದು ಡಿ. ಆರು

**32. ತಾಲ್ಲೂಕು ಪಂಚಾಯತಿಯ ವಿಶೇಷ ಸಭೆಯ ಸೂಚನೆಯನ್ನು ಕನಿಷ್ಠ ........... ಪೂರ್ವದಲ್ಲಿ ನೀಡಬೇಕು.**
ಎ. ಹತ್ತು ದಿನಗಳ ಬಿ. ಎಂಟು ದಿನಗಳ
ಸಿ. ಏಳು ದಿನಗಳ ಡಿ. ಹದಿನೈದು ದಿನಗಳ

**33. ಗ್ರಾಮಸಭೆಯನ್ನು ಕನಿಷ್ಠ .......... ತಿಂಗಳಿಗೊಮ್ಮೆ ಜರುಗಿಸಲಾಗುತ್ತದೆ.**
ಎ. ಹನ್ನೆರಡು ಬಿ. ಒಂಬತ್ತು
ಸಿ. ಆರು ಡಿ. ಮೂರು

**34. ಸಾಮಾನ್ಯವಾಗಿ ಒಬ್ಬ ಗ್ರಾಮ ಪಂಚಾಯತಿ ಸದಸ್ಯನು/ಳು ಪ್ರತಿ............. ಜನರಿಗೊಬ್ಬರಂತೆ ಚುನಾಯಿಸಲ್ಪಡುತ್ತಾನೆ?ಳೆ.**
ಎ. 600 ಬಿ. 450
ಸಿ. 400 ಡಿ. 500

**35. ಕೆಳಗಿನ ಯಾವುದು ಹಳ್ಳಿಯ ಸಾರ್ವಜನಿಕ ಆಸ್ತಿಯಾಗಿರುವುದಿಲ್ಲ?**
ಎ. ಹುಲ್ಲುಗಾವಲು ಬಿ. ಗ್ರಾಮೀಣ ಬ್ಯಾಂಕು
ಸಿ. ಕೆರೆ ಡಿ. ಬಸ್ ನಿಲ್ದಾಣ

**36. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮವನ್ನು ಜಾರಿಗೊಳಿಸಿದ ವರ್ಷ**
ಎ. 1993 ಬಿ. 2000
ಸಿ. 2003 ಡಿ. 1999

**37. ಗ್ರಾಮಸಭೆಗೆ ಕೋರಂ ಎಷ್ಟಿರಬೇಕೆಂದರೆ**
ಎ. ಗ್ರಾಮ ಪಂಚಾಯಿತಿ ಜನಸಂಖ್ಯೆಯ ಶೇಕಡಾ 10ರಷ್ಟು
ಬಿ. ಮತದಾರರ ಶೇಕಡಾ 10ರಷ್ಟು
ಸಿ. ಒಟ್ಟು ಜನಸಂಖ್ಯೆಯ ಶೇಕಡಾ 20ರಷ್ಟು
ಡಿ. ಮತದಾರರ ಶೇಕಡಾ 20ರಷ್ಟು

**38. ಮಧ್ಯಕಾಲೀನ ಗ್ರಾಮ ಪಂಚಾಯತಿಯ ರಚನಾನಂತರ ಹೊಸ ಗ್ರಾಮ ಪಂಚಾಯತಿಯ ರಚನೆಗೆ ಇರುವ ಗರಿಷ್ಠ ಕಾಲಾವಧಿಯು**
ಎ. ಆರು ತಿಂಗಳುಗಳು
ಬಿ. ನಾಲ್ಕು ತಿಂಗಳುಗಳು
ಸಿ. ಮೂರು ತಿಂಗಳುಗಳು
ಡಿ. ಐದು ತಿಂಗಳುಗಳು

**39. ಒಂದು ಗ್ರಾಮ ಪಂಚಾಯತಿಯು ತನ್ನ ಆಯವ್ಯಯದ ಅಂದಾಜನ್ನು ಅಂಗೀಕರಿಸಿಕೊಳ್ಳುವಲ್ಲಿ ವಿಫಲವಾದಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ಅದನ್ನು ..............ರಿಗೆ ಅನುಮೋದನೆಗಾಗಿ ರವಾನಿಸಬೇಕು.**
ಎ. ಜಿಲ್ಲಾ ಯೋಜನಾ ಸಮಿತಿ
ಬಿ. ತಾಲ್ಲೂಕ್ ಪಂಚಾಯತ್
ಸಿ. ರಾಜ್ಯ ಸರ್ಕಾರ
ಡಿ. ಜಿಲ್ಲಾ ಪಂಚಾಯತ್

**40. ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿಗೆ ಸಾಮಾನ್ಯ ಆಡಳಿತದಲ್ಲಿ ಮತ್ತು ಅಭಿವೃದ್ಧಿ ಯೋಜನೆ ತಯಾರಿಸುವಲ್ಲಿ ಸಹಕರಿಸಲು ........... ಉಪಕಾರ್ಯದರ್ಶಿಗಳಿರುತ್ತಾರೆ.**
ಎ. 02 ಉಪಕಾರ್ಯದರ್ಶಿಗಳು
ಬಿ. 04 ಉಪಕಾರ್ಯದರ್ಶಿಗಳು
ಸಿ. 01 ಉಪಕಾರ್ಯದರ್ಶಿ
ಡಿ. 03 ಉಪಕಾರ್ಯದರ್ಶಿಗಳು

**41. ಪಂಚಾಯತಿ ರಾಜ್ ಸಂಸ್ಥೆಗಳಿಗೆ ಸ್ಪರ್ಧಿಸಲು ಬೇಕಾಗಿರುವ ಕನಿಷ್ಟ ವರ್ಷ/ವಯಸ್ಸು**
ಎ. 21 ವರ್ಷಗಳು ಬಿ. 18 ವರ್ಷಗಳು
ಸಿ. 30 ವರ್ಷಗಳು ಡಿ. 25 ವರ್ಷಗಳು

**42. ಇತರ ಹಿಂದುಳಿದ ವರ್ಗಗಳಿಗೆ ತಾಲ್ಲೂಕು ಪಂಚಾಯತಿ ಸದಸ್ಯತ್ವದಲ್ಲಿ ನೀಡಲಾದ ಮೀಸಲಾತಿಯ ಪರಮಾಣವು ಒಟ್ಟು ಸದಸ್ಯರ.......... ಪ್ರಮಾಣವಾಗಿದೆ.**
ಎ. 1/2 ಬಿ. 1/4
ಸಿ. 2/3 ಡಿ. 1/3

**43.** SDMC stands for / SDMC ಎಂದರೆ
ಎ. ಶಾಲಾ ಅಭಿವೃದ್ಧಿ ನಿರ್ವಹಣಾ ಸಮಿತಿ
ಬಿ. ಸಾಮಾಜಿಕ ಅಭಿವೃದ್ಧಿ ನಿರ್ವಹಣಾ ಸಮಿತಿ
ಸಿ. ಅಲ್ಪಸಂಖ್ಯಾತ ಮಕ್ಕಳ ಸಾಮಾಜಿಕ ಅಭಿವೃದ್ಧಿ
ಡಿ. ಶಾಲಾ ಅಭಿವೃದ್ಧಿ ಮತ್ತು ಉಸ್ತುವಾರಿ ಸಮಿತಿ

**44. ಗ್ರಾಮ ಪಂಚಾಯಿತಿಯಲ್ಲಿರದ ಆದರೆ ಜಿಲ್ಲಾ ಪಂಚಾಯಿತಿಯಲ್ಲಿರುವ ಇಬ್ಬರು ವಿಶೇಷ ಅಧಿಕಾರಿಗಳೆಂದರೆ,**
ಎ. ಮುಖ್ಯ ಯೋಜನಾ ಅಧಿಕಾರಿ ಮತ್ತು ಮುಖ್ಯ ಲೆಕ್ಕಾಧಿಕಾರಿ
ಬಿ. ಮುಖ್ಯ ಪ್ರಾಜೆಕ್ಟ್ ಅಧಿಕಾರಿ ಮತ್ತು ಮುಖ್ಯ ಲೆಕ್ಕಾಧಿಕಾರಿ
ಸಿ. ಮುಖ್ಯ ಖಾಸಗಿ ಅಧಿಕಾರಿ ಮತ್ತು ಮುಖ್ಯ ಲೆಕ್ಕಾಧಿಕಾರಿ
ಡಿ. ಮುಖ್ಯ ಕಾರ್ಯಕ್ರಮಾಧಿಕಾರಿ ಮತ್ತು ಮುಖ್ಯ ಲೆಕ್ಕಾಧಿಕಾರಿ

**45. ಗ್ರಾಮ ಸ್ವರಾಜ್ಯದ ಅತ್ಯಂತ ತಳಮಟ್ಟದ ಘಟಕವೆಂದರೆ,**
ಎ. ಗ್ರಾಮ ಸಭಾ ಬಿ. ಗ್ರಾಮ ಪಂಚಾಯತಿ
ಸಿ. ಎಸ್‌ಡಿಎಲ್‌ಸಿ ಡಿ. ಸರ್ಕಾರೇತರ ಸಂಸ್ಥೆ

**46. ಜಿಲ್ಲಾ ಪಂಚಾಯತಿ ಅಧ್ಯಕ್ಷರ ಸಂಬಳವನ್ನು .................. ಎಂದು ನಿಗದಿ ಪಡಿಸಲಾಗಿದೆ.**
ಎ. ತಿಂಗಳಿಗೆ ರೂ. 2,250
ಬಿ. ತಿಂಗಳಿಗೆ ರೂ. 1,000
ಸಿ. ತಿಂಗಳಿಗೆ ರೂ. 1,500
ಡಿ. ತಿಂಗಳಿಗೆ ರೂ.1,800

**47. ಎಂಜಿಎನ್‌ಆರ್‌ಇಜಿ ಕಾಯ್ದೆಯಡಿಯಲ್ಲಿ ಉದ್ಯೋಗ ಚೀಟಿಯನ್ನು ಯಾರಿಗೆ ನೀಡಲಾಗುತ್ತದೆ ಎಂದರೆ,**
ಎ. ಎಲ್ಲಾ ನಗರ ಕುಟುಂಬಗಳಿಗೆ
ಬಿ. ಕೇವಲ ಎಪಿಎಲ್ ಕಾರ್ಡು ಹೊಂದಿರುವವರಿಗೆ ಮಾತ್ರ
ಸಿ. ಎಲ್ಲಾ ಗ್ರಾಮೀಣ ಕುಟುಂಬಗಳಿಗೆ
ಡಿ. ಕೇವಲ ಬಿಪಿಎಲ್ ಕಾರ್ಡು ಹೊಂದಿರುವವರಿಗೆ ಮಾತ್ರ

**48. ಗ್ರಾಮ ಪಂಚಾಯತಿಯ ರಚನೆ/ರಚನೆಯನ್ನು ಘೋಷಣೆ ಮಾಡುವವರು**
ಎ. ಅಸಿಸ್ಟೆಂಟ್ ಕಮೀಷನರ್
ಬಿ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯಿತಿ
ಸಿ. ಡೆಪ್ಯುಟಿ ಕಮೀಷನರ್
ಡಿ. ಅಧ್ಯಕ್ಷರು ಜಿಲ್ಲಾ ಪಂಚಾಯಿತಿ

**49. ಸಮುದಾಯ ಅಭಿವೃದ್ಧಿ ಯೋಜನೆಯನ್ನು ಜಾರಿಗೊಳಿಸಿದ ವರ್ಷವು**
ಎ. 1955 ಬಿ. 1952
ಸಿ. 1948 ಡಿ. 1950

**50. ಒಬ್ಬ ಜಿಲ್ಲಾ ಪಂಚಾಯಿತಿ ಸದಸ್ಯನು ತನ್ನ ರಾಜೀನಾಮೆಯನ್ನು ಯಾರಿಗೆ ನೀಡಬೇಕೆಂದರೆ,**
ಎ. ಡೆಪ್ಯುಟಿ ಕಮೀಷನರ್
ಬಿ. ಅಧ್ಯಕ್ಷ ಜಿಲ್ಲಾ ಪಂಚಾಯಿತಿ
ಸಿ. ಉಪಕಾರ್ಯದರ್ಶಿ ಜಿಲ್ಲಾ ಪಂಚಾಯತಿ
ಡಿ. ಸಿಇಓ ಜಿಲ್ಲಾ ಪಂಚಾಯತಿ

**51. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993ರ ಯಾವ ಸೆಕ್ಷನ್ ಅಡಿಯಲ್ಲಿ ಸರಿ ಹೊಂದಿಸಲಾಗದ (ಮರು ಪಡೆಯಲಾಗದ) ಮೊತ್ತವನ್ನು ಮನ್ನಾ ಮಾಡುವ ಅಧಿಕಾರವನ್ನು ಗ್ರಾಮ ಪಂಚಾಯತಿ ಹೊಂದಿರುತ್ತದೆ?**
ಎ) 255 ಬಿ) 275
ಸಿ) 265 ಡಿ) 245

**52. ಒಂದು ಪಂಚಾಯತಿ ವಿರ್ಜನೆಗೊಂಡ ನಂತರ ಮುಂದಿನ ಪಂಚಾಯತಿ ರಚನೆಗಾಗಿ ಚುನಾವಣೆಯನ್ನು ಹೊಂದಿನ ಪಂಚಾಯತಿಯು ವಿಸರ್ಜನೆಗೊಂಡ..... ಗಳ ಒಳಗೆ ನಡೆಸಬೇಕು.**
ಎ) ಮೂರು ತಿಂಗಳು
ಬಿ) ಆರು ತಿಂಗಳು
ಸಿ) ಐದು ತಿಂಗಳು
ಡಿ) ಒಂಭತ್ತು ತಿಂಗಳು

**53. ಭಾರತದ ಸಂವಿಧಾನದ ಯಾವ ವಿಧಿಯಡಿಯಲ್ಲಿ ರಾಜ್ಯ ಹಣಕಾಸು ಆಯೋಗವನ್ನು ರಚಿಸಬಹುದು?**
ಎ) 143 ಹೆಚ್ ಬಿ) 144 ಹೆಚ್
ಸಿ) 141 ಹೆಚ್ ಡಿ) 142 ಹೆಚ್

**54. ತಾಲ್ಲೂಕು ಪಂಚಾಯತಿಯಲ್ಲಿರುವ ಸ್ಥಾಯಿ ಸಮಿತಿಗಳ ಸಂಖ್ಯೆಯು**
ಎ) 6 ಬಿ) 4
ಸಿ) 5 ಡಿ) 3

**55. ಕೆಳಗಿನವುಗಳಲ್ಲಿ ಯಾವುದು ಪಿಡಿಓ ನ ಕಾರ್ಯವಲ್ಲ?**
ಎ) ದಾಖಲೆಗಳ ನಿರ್ವಹಣೆ
ಬಿ) ವಾಣಿಜ್ಯ ಲೈಸೆನ್ಸ್ ನೀಡಿಕೆ
ಸಿ) ಲೆಕ್ಕಪತ್ರಗಳ ನಿರ್ವಹಣೆ
ಡಿ) ಹಣಕಾಸು ಮಾಹಿತಿ ನೀಡಿಕೆ

**56. ಎಂಜಿಎನ್‌ಆರ್‌ಇಜಿ ದಡಿ ಕೈಗೊಳ್ಳಬೇಕಾದ ಕಾಮಗಾರಿ ಪಟ್ಟಿಯನ್ನು............ ಅನುಮೋದಿಸಬೇಕಾಗುತ್ತದೆ.**
ಎ) ಅಧ್ಯಕ್ಷ, ಸಾಮಾಜಿಕ ನ್ಯಾಯ ಸಮಿತಿ
ಬಿ) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ
ಸಿ) ಅಧ್ಯಕ್ಷ, ಗ್ರಾಮ ಪಂಚಾಯತಿ
ಡಿ) ಗ್ರಾಮಸಭೆ

**57. ಗ್ರಾಮ ಪಂಚಾಯತಿಯು ಈ ಕೆಳಗಿನ ಯಾವುದನ್ನು ಅಳವಡಿಸಿಕೊಳ್ಳುವುದರ ಮೂಲಕ ಘನತ್ಯಾಜ್ಯವನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಬಹುದಾಗಿದೆ.**
ಎ) ಉತ್ಪತ್ತಿಯಾದ ಸ್ಥಳದಲ್ಲಿ ತ್ಯಾಜ್ಯವನ್ನು ಸುಡುವುದರ ಮೂಲಕ
ಬಿ) ಗ್ರಾಮಸ್ಥರಿಗೆ ತ್ಯಾಜ್ಯವನ್ನು ನಿಗದಿತ ಸ್ಥಳದಲ್ಲಿ ಸುರಿಯಲಿಕ್ಕೆ ಸೂಚಿಸುವುದರ ಮೂಲಕ
ಸಿ) ರಸ್ತೆಬದಿಗಳಲ್ಲಿ ಕಸದ ತೊಟ್ಟಿಗಳನ್ನು ಇರಿಸಿ ಅದನ್ನು ನಿಯಮಿತವಾಗಿ ಸಂಗ್ರಹಿಸುವುದರ ಮೂಲಕ
ಡಿ) ಘನತ್ಯಾಜ್ಯದ ಖರೀದಿ ಮೂಲಕ

**58. ತಾಲ್ಲೂಕಾ ಪಂಚಾಯತಿ ಸದಸ್ಯರ ಅಧಿಕಾರ ಅವಧಿಯು**
ಎ) ಆರು ವರ್ಷಗಳು ಬಿ) ನಾಲ್ಕು ವರ್ಷಗಳು
ಸಿ) ಮೂರು ವರ್ಷಗಳು ಡಿ) ಐದು ವರ್ಷಗಳು

**59. ಬಲವಂತ್ ರಾಯ್ ಮೆಹ್ತಾ ಸಮಿತಿಯು ತನ್ನ ವರದಿಯನ್ನು ಸಲ್ಲಿಸಿದ ವರ್ಷ**
ಎ) 1966 ಬಿ) 1959
ಸಿ) 1978 ಡಿ) 1980

**60. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಜನರಿಗೆ ಗ್ರಾಮ ಪಂಚಾಯತಿಯ ಒಟ್ಟು ಸದಸ್ಯತ್ವದಲ್ಲಿ ನೀಡಲಾಗುವ ಮೀಸಲು ಪ್ರಮಾಣವು ಕ್ರಮವಾಗಿ**
ಎ) ಪರಿಶಿಷ್ಟ ಜಾತಿಯವರಿಗೆ- 16%, ಪರಿಶಿಷ್ಟ ಪಂಗಡದವರಿಗೆ-2%
ಬಿ) ರಾಜ್ಯ ಚುನಾವಣಾ ಅಧಿಕಾರಿ ನಿರ್ಧರಿಸಿದಂತೆ
ಸಿ) ಪಂಚಾಯತಿಯ ಒಟ್ಟು ಜನಸಂಖ್ಯೆಯಲ್ಲಿರುವ ಅವರ ಜನಸಂಖ್ಯೆಯ ಪ್ರಮಾಣಕ್ಕೆ ಅನುಗುಣವಾಗಿ
ಡಿ) ಪರಿಶಿಷ್ಟ ಜಾತಿಯವರಿಗೆ- 15%, ಪರಿಶಿಷ್ಟ ಪಂಗಡದವರಿಗೆ-3%

**61. ಬಡತನ ರೇಖೆಗಿಂತ ಕೆಳಗಿನ ಕುಟುಂಬಗಳಿಗೆ ವೈಯಕ್ತಿಕ ಶೌಚಾಲಯ ನಿರ್ಮಿಸಲು ನೀಡುವ ರಿಯಾಯಿತಿಯ ಪ್ರಮಾಣವು**
ಎ) 80% ಬಿ) 75%
ಸಿ) 50% ಡಿ) 70%

**62. ಎಸ್‌ಡಿಎಂಸಿ ಯ ಅಧ್ಯಕ್ಷರು**
ಎ) ಪಿಡಿಓ
ಬಿ) ಶಾಲಾ ಮುಖ್ಯೋಪಾಧ್ಯಾಯರು
ಸಿ) ಅಧ್ಯಕ್ಷರು, ಉತ್ಪಾದನಾ ಸಮಿತಿ
ಡಿ) ಅಧ್ಯಕ್ಷರು, ಗ್ರಾಮ ಪಂಚಾಯತಿ

**63. ..........(ಸಭೆಯಲ್ಲಿ) ಗ್ರಾಮ ಪಂಚಾಯತಿಯ ವಾರ್ಷಿಕ ಯೋಜನೆಯ ಪರಿಶೀಲನೆ ಹಾಗೂ ಅನುಮೋದನೆಯನ್ನು ಕೈಗೊಳ್ಳಲಾಗುತ್ತದೆ.**
ಎ) ಗ್ರಾಮಸಭಾ ಬಿ) ಸಾಮಾನ್ಯ ಸಭೆ
ಸಿ) ಸಾಮಾನ್ಯ ಸಭೆ ಡಿ) ವಾರ್ಡ್ ಸಭಾ

**64. 31-10-2016ರಂದು ಕರ್ನಾಟಕ ರಾಜ್ಯದಲ್ಲಿದ್ದ ಒಟ್ಟು ತಾಲ್ಲೂಕು ಪಂಚಾಯತಿಗಳ ಸಂಖ್ಯೆಯು**
ಎ) 177 ಬಿ) 174
ಸಿ) 175 ಡಿ) 176

**65. ಈ ಕೆಳಗಿನವುಗಳಲ್ಲಿ ಯಾವುದು ಭಾರತದ ಪಂಚಾಯತ್ ರಾಜ್ ವ್ಯವಸ್ಥೆಯ ಸಾಂವಿಧಾನಿಕವಾದ ಅಂಗವಲ್ಲ?**
ಎ) ಚುನಾವಣಾ ಆಯೋಗ
ಬಿ) ಜಿಲ್ಲಾ ಪಂಚಾಯತ್
ಸಿ) ತಾಲ್ಲೂಕು ಪಂಚಾಯತ್
ಡಿ) ಗ್ರಾಮ ಪಂಚಾಯತ್

**66. 2ನೇ ಅಕ್ಟೋಬರ್ 1959ರಂದು ರಾಜಸ್ಥಾನದ ಯಾವ ಜಿಲ್ಲೆಯು ಪಂಚಾಯತ್ ರಾಜ್ ವ್ಯವಸ್ಥೆಯನ್ನು ಅಳವಡಿಸುವಲ್ಲಿ ಪ್ರಥಮ**

ಎನಿಸಿಕೊಂಡಿತು?
ಎ) ನಾಗೋರ್ ಬಿ) ಜೋಧ್‌ಪುರ್
ಸಿ) ಜೈಸಲ್ಮೇರ್ ಡಿ) ಹನುಮಾನ್ ಗಢ

67. ಒಂದು ಗ್ರಾಮ ಪಂಚಾಯತಿಗೆ ಆಡಳಿತಾಧಿಕಾರಿಯನ್ನು ನೇಮಿಸಬಹುದಾದ ಗರಿಷ್ಠ ಅವಧಿಯು
ಎ) ಒಂಭತ್ತು ತಿಂಗಳುಗಳು
ಬಿ) ಮೂರು ತಿಂಗಳುಗಳು
ಸಿ) ಆರು ತಿಂಗಳುಗಳು
ಡಿ) ಹನ್ನೆರಡು ತಿಂಗಳುಗಳು

68. ಗ್ರಾಮ ಪಂಚಾಯಿತಿಯ ಲೆಕ್ಕಗಳು ಹಾಗೂ ಆಯವ್ಯಯವನ್ನು ಸಾದರಪಡಿಸುವವರು ಯಾರೆಂದರೆ
ಎ) ಉಪಾಧ್ಯಕ್ಷ
ಬಿ) ಉತ್ಪಾದನಾ ಸಮಿತಿಯ ಅಧ್ಯಕ್ಷ
ಸಿ) ಅಧ್ಯಕ್ಷ
ಡಿ) ಪಂಚಾಯಿತಿ ಅಭಿವೃದ್ಧಿ ಅಧಿಕಾರಿ

69. ಕರ್ನಾಟಕದ ಮೂರನೆಯ ಹಣಕಾಸು ನಿಗಮವು ಶಿಫಾರಸ್ಸು ಮಾಡಿದಂತೆ ಪ್ರತಿ ಗ್ರಾಮ ಪಂಚಾಯತಿಗೆ ಕೊಡಮಾಡುವ ಶಾಸನಬದ್ಧ ಅನುದಾನದ ಮೊತ್ತವು
ಎ) ರೂ. 10 ಲಕ್ಷಗಳು ಪ್ರತಿ ವರ್ಷ
ಬಿ) ರೂ. 8 ಲಕ್ಷಗಳು ಪ್ರತಿ ವರ್ಷ
ಸಿ) ರೂ. 5 ಲಕ್ಷಗಳು ಪ್ರತಿ ವರ್ಷ
ಡಿ) ರೂ. 7.5 ಲಕ್ಷಗಳು ಪ್ರತಿ ವರ್ಷ

70. ಗ್ರಾಮ ಪಂಚಾಯತಿ ಅಧ್ಯಕ್ಷನು / ಅಧ್ಯಕ್ಷೆಯು ತನ್ನ ರಾಜೀನಾಮೆಯನ್ನು ..................ಗೆ ಸಲ್ಲಿಸಬೇಕು.
ಎ) ಸಿಇಓ ಜಿಲ್ಲಾ ಪಂಚಾಯತಿ
ಬಿ) ಅಸಿಸ್ಟೆಂಟ್ ಕಮಿಷನರ್
ಸಿ) ಇಓ ತಾಲ್ಲೂಕು ಪಂಚಾಯತಿ
ಡಿ) ಡೆಪ್ಯುಟಿ ಕಮೀಷನರ್

71. ಅಕ್ಟೋಬರ್ 2016ರ ವೇಳೆಗೆ ಭಾರತದಲ್ಲಿ ಎಂಜಿಎನ್‌ಆರ್‌ಇಜಿ ಕಾಯ್ದೆಯಡಿಯಲ್ಲಿ ಒಳಗೊಂಡಿರುವ ಒಟ್ಟು ಜಿಲ್ಲೆಗಳ ಸಂಖ್ಯೆಯು
ಎ) 655 ಬಿ) 650
ಸಿ) 665 ಡಿ) 661

**72. ಕರ್ನಾಟಕದಲ್ಲಿ ಗ್ರಾಮ ಪಂಚಾಯತ್ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ (GPHDI) ಈ ಕೆಳಗಿನ ಯಾವ ಗ್ರಾಮ ಪಂಚಾಯತಿಯು ಪ್ರಥಮ ಸ್ಥಾನ ಹೊಂದಿದೆ?**
ಎ) ಅಮದಳಿ ಬಿ) ಉಜಿರೆ
ಸಿ) ಶ್ರೀಕಂಠಪುರ ಡಿ) ಐಕಳ

73. ರಾಜೀನಾಮೆ ಸಲ್ಲಿಸಬೇಕಾದಲ್ಲಿ ತಾಲ್ಲೂಕು ಪಂಚಾಯತಿ ಅಧ್ಯಕ್ಷರು ರಾಜೀನಾಮೆ ಪತ್ರವನ್ನು ...................ರಿಗೆ ಸಲ್ಲಿಸಬೇಕು
ಎ) ಸಂಬಂಧಪಟ್ಟ ಡೆಪ್ಯುಟಿ ಕಮೀಷನರ್‌ಗೆ
ಬಿ) ಸಂಬಂಧಪಟ್ಟ ತಹಶೀಲುದಾರರಿಗೆ
ಸಿ) ತಾಲ್ಲೂಕು ಪಂಚಾಯಿತಿ ಉಪಾಧ್ಯಕ್ಷರಿಗೆ
ಡಿ) ಸಂಬಂಧಪಟ್ಟ ಉಪವಿಭಾಗಾಧಿಕಾರಿಗೆ

74. ಸ್ವಚ್ಛ ಭಾರತ ಅಭಿಯಾನ ಜಾರಿಗೊಳಿಸಿದ ದಿನಾಂಕ
ಎ) ಅಕ್ಟೋಬರ್ 2, 2013
ಬಿ) ಅಕ್ಟೋಬರ್ 2, 2015
ಸಿ) ಅಕ್ಟೋಬರ್ 2, 2014
ಡಿ) ಅಕ್ಟೋಬರ್ 2, 2016

75. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993ರ ಯಾವ ಸೆಕ್ಷನ್‌ದಲ್ಲಿ ಜಿಲ್ಲಾ ಪಂಚಾಯತಿಯ ಬಾಕಿ ಹಿಂಪಡೆಯುವ ಕ್ರಮವನ್ನು ಪ್ರಸ್ತಾಪಿಸಲಾಗಿದೆ.
ಎ) 264 ಬಿ) 265
ಸಿ) 270 ಡಿ) 260

76. ಗ್ರಾಮ ಪಂಚಾಯತಿ ಸದಸ್ಯರನ್ನು ಚುನಾಯಿಸಲು ಪ್ರತಿ ಮತದಾರನು ಚಲಾಯಿಸಬಹುದಾದ ಮತಗಳ ಸಂಖ್ಯೆ ಎಷ್ಟು?
ಎ) ಚುನಾವಣಾ ಕ್ಷೇತ್ರದಿಂದ ಆಯ್ಕೆ ಮಾಡಬೇಕಾದ ಸದಸ್ಯರ ಸಂಖ್ಯೆಯಷ್ಟು
ಬಿ) ರಾಜ್ಯ ಚುನಾವಣಾ ಆಯೋಗ ನಿರ್ಧರಿಸಿದಷ್ಟು
ಸಿ) ಕೇಂದ್ರ ಚುನಾವಣಾ ಆಯೋಗ ನಿರ್ಧರಿಸಿದಷ್ಟು
ಡಿ) ಒಂದು

77. ಈ ಕೆಳಗಿನವುಗಳಲ್ಲಿ ಯಾವ ರಾಜ್ಯದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ ಜಾರಿಯಲ್ಲಿದೆ?
ಎ) ನಾಗಾಲ್ಯಾಂಡ್ ಬಿ) ಮೇಘಾಲಯ
ಸಿ) ಮಿಥೋರಾಮ್ ಡಿ) ಮಣಿಪುರ

78. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆಯ ಯಾವ ಅನುಸೂಚನೆಯನುಸಾರ ಪಂಚಾಯಿತಿಗಳು ತಮ್ಮ ಸ್ವಂತ ನಿಧಿಯನ್ನು ಸಂಗ್ರಹಿಸಬಹುದು?
ಎ) Vನೇ ಅನುಸೂಚಿ
ಬಿ) IVನೇ ಅನುಚೂಸಿ
ಸಿ) VIIನೇ ಅನುಸೂಚಿ
ಡಿ) VIನೇ ಅನುಸೂಚಿ

79. ಒಬ್ಬ ಚುನಾಯಿತ ಗ್ರಾಮ ಪಂಚಾಯತಿ ಸದಸ್ಯ ತನ್ನ ಸ್ವತ್ತು ಬಾಧ್ಯತೆಗಳನ್ನು ಆತ/ಆಕೆ ಚುನಾಯಿತನಾದ............ಗಳ ಒಳಗೆ ಘೋಷಿಸಬೇಕು.
ಎ) ಆರು ತಿಂಗಳು
ಬಿ) ನಾಲ್ಕು ತಿಂಗಳು
ಸಿ) ಮೂರು ತಿಂಗಳು
ಡಿ) ಒಂಭತ್ತು ತಿಂಗಳು

80. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993ರ ಯಾವ ಸೆಕ್ಷನ್ ಪ್ರಕಾರ ಗ್ರಾಮ ಪಂಚಾಯಿತಿಯು ತನ್ನ ಸ್ವತ್ತನ್ನು ಸ್ವಾಧೀನಪಡಿಸುವುದು, ಹಿಡಿತದಲ್ಲಿಡುವುದು ಮತ್ತು ವಿಲೇ ಮಾಡಬಹುದು?
ಎ) 109 ಬಿ) 210
ಸಿ) 119 ಡಿ) 209

81. ಜಿಲ್ಲಾ ಪಂಚಾಯಿತಿಯಲ್ಲಿ............ ಸ್ಥಾಯಿ ಸಮಿತಿಗಳಿಗೆ ಅವಕಾಶವಿರುತ್ತದೆ.
ಎ) 4 Standing Committees/4
ಬಿ) 6 Standing Committees/8
ಸಿ) 3 Standing Committees/3
ಡಿ) 5 Standing Committees/5

82. ಗ್ರಾಮದಲ್ಲಿ ಕಲ್ಯಾಣ ಕಾರ್ಯಕ್ರಮಗಳ ಪ್ರಯೋಜನದಾರರ ಪಟ್ಟಿಯನ್ನು ಗುರುತಿಸುವ ಸಂಸ್ಥೆಯು
ಎ) ಪಿಡಿಓ
ಬಿ) ಗ್ರಾಮ ಲೆಕ್ಕಿಗ
ಸಿ) ಅಧ್ಯಕ್ಷರು, ಗ್ರಾಮ ಪಂಚಾಯತಿ
ಡಿ) ಗ್ರಾಮ ಸಭೆ

83. ಜಿಲ್ಲಾ ಪಂಚಾಯತಿಯ ಜಿಲ್ಲಾ ಯೋಜನಾ ಸಮಿತಿಯ ಅಧ್ಯಕ್ಷ
ಎ) ಡೆಪ್ಯುಟಿ ಕಮೀಷನರ್
ಬಿ) ಜಿಲ್ಲಾ ಪಂಚಾಯಿತಿಯ ಅಧ್ಯಕ್ಷ
ಸಿ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
ಡಿ) ಮುಖ್ಯ ಯೋಜನಾಧಿಕಾರಿ

84. ಮೈಸೂರು ಗ್ರಾಮ ಪಂಚಾಯತಿ ಮತ್ತು ಸ್ಥಳೀಯ ಬೋರ್ಡ್‌ಗಳ ಕಾಯ್ದೆಯನ್ನು ಅಂಗೀಕರಿಸಿದ ವರ್ಷ
ಎ) 1959 ಬಿ) 1951
ಸಿ) 1957 ಡಿ) 1955

85. ಎಂಜಿಎನ್‌ಆರ್‌ಇಜಿ ಕಾಯ್ದೆಯು ಅಂಗೀಕಾರವಾದ ವರ್ಷವು
ಎ) 2005 ಬಿ) 2008
ಸಿ) 2006 ಡಿ) 2007

86. ವೃದ್ಧಾಪ್ಯ, ಅಂಗವಿಕಲ ಮತ್ತು ವಿಧವಾ ವೇತನ ಯೋಜನೆಗಳ ಉಸ್ತುವಾರಿಯು ಗ್ರಾಮ ಪಂಚಾಯತಿಗಳ.......... ಕಾರ್ಯಗಳಲ್ಲಿ ಒಂದಾಗಿದೆ
ಎ) ಸಾಮಾನ್ಯ ಬಿ) ಮಾಧ್ಯಮಿಕ
ಸಿ) ಪ್ರಾಥಮಿಕ ಡಿ) ತೃತೀಯ

87. ಗ್ರಾಮ ಪಂಚಾಯತಿಯಲ್ಲಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಗೈರು ಹಾಜರಿಯಲ್ಲಿ ಅಧ್ಯಕ್ಷರ ಕಾರ್ಯಭಾರವನ್ನು......... ನಿರ್ವಹಿಸುವರು
ಎ) ಪಂಚಾಯತ್ ಅಭಿವೃದ್ಧಿ ಅಧಿಕಾರಿ
ಬಿ) ಅಧ್ಯಕ್ಷರು ತಾಲ್ಲೂಕು ಪಂಚಾಯತಿ
ಸಿ) ಅಧ್ಯಕ್ಷರು ಸಾಮಾಜಿಕ ನ್ಯಾಯ ಸಮಿತಿ
ಡಿ) ಕಾರ್ಯ ನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ

88. ವಿಶೇಷ ಘಟಕ ಯೋಜನೆಯು ಈ ಕೆಳಗಿನ ಯಾರ ಅಭಿವೃದ್ಧಿಗಾಗಿ ರೂಪಿಸಲಾಗುತ್ತದೆ?
ಎ) ಅಲ್ಪಸಂಖ್ಯಾತರು
ಬಿ) ಇತರೆ ಹಿಂದುಳಿದ ವರ್ಗಗಳು
ಸಿ) ಪರಿಶಿಷ್ಟ ಪಂಗಡ
ಡಿ) ಪರಿಶಿಷ್ಟ ಜಾತಿ

89. ಅಶೋಕ ಮೆಹ್ತಾ ಸಮಿತಿಯು........ನ್ನು ಸ್ಥಾಪಿಸಲು ಶಿಫಾರಸು ಮಾಡಿತು
ಎ) ಪಂಚಾಯತಿಗೆ ಸಮಿತಿ
ಬಿ) ಮಂಡಲ್ ಪಂಚಾಯತ್
ಸಿ) ನಗರ ಪಂಚಾಯತ್
ಡಿ) ಗ್ರಾಮ ಪಂಚಾಯತ್

90. ತಾಲ್ಲೂಕು ಪಂಚಾಯತಿಯನ್ನು ವಿಸರ್ಜಿಸಬಹುದಾದ ಅಧಿಕಾರವನ್ನು ಹೊಂದಿರವವರು
ಎ) ರಾಜ್ಯ ಸರ್ಕಾರ
ಬಿ) ಜಿಲ್ಲಾ ಪಂಚಾಯತಿ
ಸಿ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
ಡಿ) ಡೆಪ್ಯುಟಿ ಕಮೀಷನರ್

91. 2015-16ರ ಸಾಲಿನಲ್ಲಿ ಕರ್ನಾಟಕದಲ್ಲಿ ಎಂಜಿಎನ್‌ಆರ್‌ಇಜಿ ಕಾಯ್ದೆಯಡಿಯಲ್ಲಿ ಬಳಸಲ್ಪಟ್ಟ ನಿಧಿಗಳ ಶೇಕಡಾ ಪ್ರಮಾಣ
ಎ) ಶೇಕಡಾ 118.73
ಬಿ) ಶೇಕಡಾ 138.73
ಸಿ) ಶೇಕಡಾ 120.73
ಡಿ) ಶೇಕಡಾ 128.73

92. ಬಾಲಕಾರ್ಮಿಕರೆಂದರೆ.... ವಯಸ್ಸಿನೊಳಗಿನ ಕೆಲಸ ಮಾಡುತ್ತಿರುವ ಮಕ್ಕಳಾಗಿರುತ್ತಾರೆ
ಎ) 14 ವರ್ಷಗಳು ಬಿ) 15 ವರ್ಷಗಳು
ಸಿ) 16 ವರ್ಷಗಳು ಡಿ) 18 ವರ್ಷಗಳು

93. ಜನವಸತಿ ಸಭಾದ ಸಭೆಯ ಕೋರಂ ಅನ್ನು............ ಎಂದು ನಿಗದಿಗೊಳಿಸಲಾಗಿದೆ
ಎ) 20 ಸದಸ್ಯರು ಮತ್ತು 1/5ರಷ್ಟು ಮತದಾರರು
ಬಿ) 1/5 ರಷ್ಟು ಮತದಾರರು
ಸಿ) 20 ಸದಸ್ಯರು
ಡಿ) 20 ಸದಸ್ಯರು ಅಥವಾ 1/5ರಷ್ಟು ಮತದಾರರು

94. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993ರ ಯಾವ ಸೆಕ್ಷನ್ ಅಡಿಯಲ್ಲಿ ಪಂಚಾಯಿತಿಗಳು ಕುಡಿಯುವ ನೀರಿನ ಮೇಲೆ ಲೆವಿ ವಿಧಿಸಬಹುದು?
ಎ) 189 (2) ಬಿ) 179 (2)
ಸಿ) 169 (2) ಡಿ) 199 (2)

95. ಜಿಲ್ಲಾ ಪಂಚಾಯಿತಿಯ ಮುಖ್ಯ ಲೆಕ್ಕಾಧಿಕಾರಿಯ ಕರ್ತವ್ಯಗಳು ಮತ್ತು ಜವಾಬ್ದಾರಿಗಳ ಕುರಿತು ಎಲ್ಲಿ ವಿವರಿಸಲಾಗಿದೆ ಎಂದರೆ
1) ಕೆಪಿಆರ್ 1996ರ 25 ಮತ್ತು 20ನೇ ವಿಧಿಗಳು
2) ಕೆಪಿಆರ್ 1996ರ 26 ಮತ್ತು 27ನೇ ವಿಧಿಗಳಲ್ಲಿ
3) ಕೆಪಿಆರ್ 1996ರ 25 ಮತ್ತು 27ನೇ ವಿಧಿಗಳಲ್ಲಿ
4) ಕೆಪಿಆರ್ 1996ರ 26 ಮತ್ತು 29ನೇ ವಿಧಿಗಳಲ್ಲಿ

96. ಜಿಲ್ಲಾ ಪಂಚಾಯತಿಗೆ ಮುಖ್ಯ ಯೋಜನಾ ಅಧಿಕಾರಿಯನ್ನು ನೇಮಿಸುವವರು ಯಾರೆಂದರೆ
ಎ) ರಾಜ್ಯ ಸರ್ಕಾರ
ಬಿ) ಕೇಂದ್ರ ಸರ್ಕಾರ
ಸಿ) ಡೆಪ್ಯುಟ
4 ಕಮೀಷನರ್

97. ಗ್ರಾಮ ಮಟ್ಟದಲ್ಲಿ ಮಹಿಳೆಯರಿಗೆ ಮತ್ತು ಮಕ್ಕಳಿಗೆ ಹೆಚ್ಚುವರಿ ಪೋಷಣೆಯನ್ನು ಒದಗಿಸುವ ಸಂಸ್ಥೆಯು
ಎ) ಅಂಗನವಾಡಿ ಬಿ) ರೇಷನ್ ಅಂಗಡಿ
ಸಿ) ಬಾಲವಾಡಿ ಡಿ) ಉಪಕೇಂದ್ರ

98. ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿಯು ಸಹ ಅಧ್ಯಕ್ಷರು.... ಆಗಿರುತ್ತಾರೆ
ಎ) ಅಧ್ಯಕ್ಷರು, ತಾಲ್ಲೂಕು ಪಂಚಾಯತ್
ಬಿ) ಉಪಾಧ್ಯಕ್ಷರು, ತಾಲ್ಲೂಕು ಪಂಚಾಯತ್
ಸಿ) ಎಂಎಲ್‌ಎ
ಡಿ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ

99. ಗ್ರಾಮ ಪಂಚಾಯತಿಯ ಅಧ್ಯಕ್ಷರು ಮಾಸಿಕ................ ಮೊತ್ತದ ಗೌರವಧನಕ್ಕೆ ಭಾಧ್ಯಸ್ಥರಾಗಿರುವರು
ಎ) ರೂ. 500 ಬಿ) ರೂ. 250
ಸಿ) ರೂ. 750 ಡಿ) ರೂ. 300

100. ಪಂಚಾಯತ್ ಪ್ರದೇಶದಲ್ಲಿ ನಿರ್ದಿಷ್ಟ ಅವಧಿಯಲ್ಲಿ ಒಟ್ಟಾರೆ ಅಭಿವೃದ್ಧಿಯನ್ನು ಸಾಧಿಸುವುದಕ್ಕಾಗಿ ತಯಾರಿಸಲಾದ ಯೋಜನೆಯು
ಎ) ಮುನ್ನೋಟ ದಾಖಲೆ
ಬಿ) ದೀರ್ಘಾವಧಿ ಯೋಜನೆ
ಸಿ) ಗ್ರಾಮ ಯೋಜನೆ
ಡಿ) ಪಂಚ ವಾರ್ಷಿಕ ಯೋಜನೆ

## ಉತ್ತರಗಳು

| | | | |
|---|---|---|---|
| 1-ಸಿ | 26-ಎ | 51-ಡಿ | 76-ಎ |
| 2-ಸಿ | 27-ಎ | 52-ಬಿ | 77-ಡಿ |
| 3-ಡಿ | 28-ಸಿ | 53-ಸಿ | 78-★ |
| 4-ಡಿ | 29-ಸಿ | 54-ಡಿ | 79-ಸಿ |
| 5-ಬಿ | 30-ಡಿ | 55-ಬಿ | 80-★ |
| 6-ಎ | 31-ಡಿ | 56-ಸಿ | 81-ಸಿ |
| 7-ಸಿ | 32-ಎ* | 57-ಸಿ | 82-ಎ |
| 8-ಎ | 33-ಡಿ | 58-ಡಿ | 83-ಬಿ |
| 9-ಡಿ | 34-ಸಿ | 59-ಸಿ | 84-ಎ |
| 10-ಡಿ | 35-ಬಿ | 60-ಸಿ | 85-ಎ |
| 11-ಬಿ | 36-ಬಿ | 61-ಎ | 86-ಎ |
| 12-ಎ | 37-ಸಿ | 62-ಡಿ | 87-ಸಿ |
| 13-ಎ | 38-ಸಿ | 63-ಎ | 88-ಡಿ |
| 14-ಡಿ | 39-ಬಿ | 64-ಡಿ | 89-ಬಿ |
| 15-ಸಿ | 40-ಎ | 65-ಎ | 90-ಬಿ |
| 16-ಎ | 41-ಎ | 66-ಎ | 91-ಬಿ |
| 17-ಡಿ | 42-ಡಿ | 67-ಸಿ | 92-ಎ |
| 18-ಎ | 43-ಡಿ | 68-ಡಿ | 93-ಡಿ |
| 19-ಡಿ | 44-ಎ | 69-ಡಿ | 94-★ |
| 20-ಬಿ | 45-ಎ | 70-ಬಿ | 95-★ |
| 21-ಎ | 46-ಎ | 71-ಸಿ | 96-ಎ |
| 22-ಬಿ | 47-ಡಿ | 72-ಸಿ | 97-ಎ |
| 23-ಎ | 48-ಸಿ | 73-ಎ | 98-ಬಿ |
| 24-ಎ | 49-ಬಿ | 74-ಸಿ | 99-ಸಿ |
| 25-ಸಿ | 50-ಬಿ | 75-ಎ | 100-ಡಿ |

## ಕರ್ನಾಟಕ ಪೊಲೀಸ್ ಇಲಾಖೆ : ಪೊಲೀಸ್ ತರಬೇತಿ ಶಾಲೆ, ಕಡೂರು

# ಅನುಯಾಯಿ (ಪುರುಷ ಮತ್ತು ಮಹಿಳೆ) ಹುದ್ದೆಗಳ ನೇಮಕಾತಿ

**ಪೊಲೀಸ್ ತರಬೇತಿ ಶಾಲೆ, ಕಡೂರು, ಚಿಕ್ಕಮಗಳೂರು ಜಿಲ್ಲೆ ಇಲ್ಲಿ ಖಾಲಿಯಿರುವ 19 ಅನುಯಾಯಿ ಹುದ್ದೆಗಳ ನೇಮಕಾತಿಗಾಗಿ ಕರ್ನಾಟಕ ರಾಜ್ಯ ಪೊಲೀಸ್ ಸೇವೆಗಳು, ಲಿಪಿಕ ವೃಂದ ಸೇರಿದಂತೆ (ನೇಮಕಾತಿ) ನಿಯಮಗಳು 2004, ಕರ್ನಾಟಕ ನಾಗರೀಕ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ಪ್ರಕಾರ ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ/140/ಇಎಫ್‌ಎಸ್/ 2014, ದಿನಾಂಕ: 28.10.2015, ಮಾನ್ಯ ಮಹಾ ನಿರ್ದೇಶಕರು ಮತ್ತು ಪೊಲೀಸ್ ಮಹಾ ನಿರೀಕ್ಷಕರು, ಕರ್ನಾಟಕ ರಾಜ್ಯ, ಬೆಂಗಳೂರು ರವರ ಆದೇಶ ಸಂಖ್ಯೆ: 39/ಸಿಬ್ಬಂದಿ-3/2014-15, (ಭಾಗ-2), ಓಬಿಸಂ: 572:2016, ದಿನಾಂಕ: 08.09.2016 ರಲ್ಲಿ ಅನುಮತಿಸಿರುವಂತೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.**

ಅರ್ಜಿಗಳನ್ನು ಪೊಲೀಸ್ ಅಧೀಕ್ಷಕರು ಮತ್ತು ಪ್ರಾಂಶುಪಾಲರು, ಪೊಲೀಸ್ ತರಬೇತಿ ಶಾಲೆ, ಕಡೂರು-577548 ರವರ ಕಛೇರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ತಿಳಿಸಲಾಗಿದೆ.

■ **ಅರ್ಜಿ ಶುಲ್ಕ:**

| | |
|---|---|
| ಸಾಮಾನ್ಯ ವರ್ಗ, 2(ಎ), 2(ಬಿ), 3(ಎ), 3(ಬಿ)ಗೆ ಸೇರಿದ ಅಭ್ಯರ್ಥಿಗಳಿಗೆ | ರೂ. 250.00 |
| ಪರಿಶಿಷ್ಟ ಜಾತಿ, ಪರಿಶಿಷ್ಠ ಪಂಗಡ, ಪ್ರವರ್ಗ-1ಕ್ಕೆ ಸೇರಿದ ಅಭ್ಯರ್ಥಿಗಳಿಗೆ | ರೂ. 100.00 |

ನಿಗದಿತ ಶುಲ್ಕಕ್ಕೆ ಕಾರ್ಪೋರೇಷನ್ ಬ್ಯಾಂಕ್/ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಬ್ಯಾಂಕುಗಳ ಅಧಿಕೃತ ಶಾಖೆಯಿಂದ ಡಿ.ಡಿ.ಯನ್ನು ''ಪೊಲೀಸ್ ಅಧೀಕ್ಷಕರು ಮತ್ತು ಪ್ರಾಂಶುಪಾಲರು, ಪೊಲೀಸ್ ತರಬೇತಿ ಶಾಲೆ, ಕಡೂರು'' (SP & Principal, Police Training School, Kadur) ರವರ ಹೆಸರಿನಲ್ಲಿ ಪಡೆದು ಅರ್ಜಿಯೊಂದಿಗೆ ಲಗತ್ತಿಸಿ ಸಲ್ಲಿಸುವುದು. ಒಮ್ಮೆ ಶುಲ್ಕವನ್ನು ಪಾವತಿಸಿದ ನಂತರ ಅದನ್ನು ಯಾವುದೇ ಸಂದರ್ಭದಲ್ಲಿಯೂ ಹಿಂದಿರುಗಿಸಲಾಗುವುದಿಲ್ಲ ಅಥವಾ ಅದನ್ನು ಇತರೆ ಯಾವುದೇ ಪರೀಕ್ಷೆ/ ನೇಮಕಾತಿಗಳಿಗೆ ಹೊಂದಿಸಿಕೊಳ್ಳಲಾಗುವುದಿಲ್ಲ.

■ **ಅರ್ಜಿ ಸಲ್ಲಿಸುವ ವಿಧಾನ :**

ನಿಗದಿತ ನಮೂನೆಯ ಅರ್ಜಿ ಹಾಗೂ ಮಾಹಿತಿ/ ಸೂಚನೆಗಳನ್ನು ಇಲಾಖೆಯ ಅಧಿಕೃತ ವೆಬ್‌ಸೈಟ್ www.ksp.gov.inನಲ್ಲಿ ಪ್ರಕಟಿಸಲಾಗಿದೆ ಹಾಗೂ ಪೊಲೀಸ್ ಅಧೀಕ್ಷಕರು ಮತ್ತು ಪ್ರಾಂಶುಪಾಲರು, ಪೊಲೀಸ್ ತರಬೇತಿ ಶಾಲೆ, ಕಡೂರು ಕಛೇರಿಯ ಸೂಚನಾ ಫಲಕದಲ್ಲೂ ಪ್ರಕಟಿಸಲಾಗಿರುತ್ತದೆ. ಅರ್ಜಿ ನಮೂನೆಯನ್ನು ಅಭ್ಯರ್ಥಿಗಳು ತಮ್ಮ ವೈಯಕ್ತಿಕ ಖರ್ಚಿನಲ್ಲಿ ಬೆರಳಚ್ಚು ಮಾಡಿಸಿ, ಪಾಸ್‌ಪೋರ್ಟ್ ಅಳತೆಯ-2 ಬಣ್ಣದ ಭಾವಚಿತ್ರ ಹಾಗೂ ಸಹಿಯೊಂದಿಗೆ ಅರ್ಜಿಯಲ್ಲಿರುವ ಎಲ್ಲಾ ವಿವರಗಳನ್ನು ಸಮರ್ಪಕವಾಗಿ ಭರ್ತಿ ಮಾಡಿ, ಪೊಲೀಸ್ ತರಬೇತಿ ಶಾಲೆ, ಕಡೂರು ಕಛೇರಿಗೆ ಸಲ್ಲಿಸುವುದು.

- **ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕ: 09-02-2017 ರಂದು ಬೆಳಿಗ್ಗೆ 10 ಗಂಟೆಯಿಂದ.**
- **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 10-03-2017 ರಂದು ಸಂಜೆ 05 ಗಂಟೆಯವರೆಗೆ.**

**ಸೂಚನೆ :**

- ನಿಗದಿತ ದಿನಾಂಕ ಹಾಗೂ ಸಮಯದೊಳಗೆ ಸಲ್ಲಿಸಲಾಗುವ ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗುವುದು.
- ಅಂಚೆ ಮೂಲಕ ಸಲ್ಲಿಸುವ ಅರ್ಜಿಗಳು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ಈ ಕಛೇರಿಗೆ ತಲುಪದಿದ್ದಲ್ಲಿ, ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲವೆಂದು ತಿಳಿಸಲಾಗಿದೆ.
- ಈ ಕೆಳಗೆ ನಮೂದಿಸಿರುವ ಖಾಲಿ ಹುದ್ದೆಗಳ ಸಂಖ್ಯೆ ತಾತ್ಕಾಲಿಕವಾಗಿದ್ದು, ಅವಶ್ಯಕತೆ ಹಾಗೂ ಸಂದರ್ಭಕ್ಕೆ ಅನುಗುಣವಾಗಿ ಬದಲಾವಣೆ ಮಾಡಲಾಗುವುದು.

| ವರ್ಗ | ಒಟ್ಟು ಹುದ್ದೆಗಳ ಸಂಖ್ಯೆ | ಮ. ಅ. | ಗ್ರಾ. ಅ. | ಮಾ. ಸೈ. | ಯೋ. ನಿ. ಅ. | ಕ. ಮಾ. | ಇತರೆ |
|---|---|---|---|---|---|---|---|
| ಸಾಮಾನ್ಯ9 | 3 | 3 | - | - | - | 3 | |
| ಪ.ಜಾತಿ | 3 | 1 | 1 | - | - | - | 1 |
| ಪ.ಪಂಗಡ | 1 | - | - | - | - | - | 1 |
| ಪ್ರ-1 | 1 | - | - | - | - | - | 1 |
| ಪ್ರ-2ಎ | 2 | 1 | - | - | - | - | 1 |
| ಪ್ರ-2ಬಿ | 1 | - | - | - | - | - | 1 |
| ಪ್ರ-3ಎ | 1 | - | - | - | - | - | 1 |
| ಪ್ರ-3ಬಿ | 1 | - | - | - | - | - | 1 |
| ಒಟ್ಟು | 19 | 05 | 04 | - | - | - | 10 |

**ಖಾಲಿಯಿರುವ 19 ಅನುಯಾಯಿ ಹುದ್ದೆಗಳಲ್ಲಿ ವೃತ್ತಿವಾರು (Trade) ಹುದ್ದೆಗಳನ್ನು ಭರ್ತಿ ಮಾಡಬೇಕಾದ ವಿವರಗಳು ಕೆಳಕಂಡಂತಿವೆ.**

| ಕ್ರ. ಸಂ. | ವೃತ್ತಿ | ಮಂಜೂರಾತಿ ಬಲ/ಖಾಲಿ ಹುದ್ದೆಗಳು |
|---|---|---|
| 1. | ಡ್ರೈ ಸ್ವೀಪರ್ | 04 |
| 2. | ವೆಟ್ ಸ್ವೀಪರ್ | 04 |
| 3. | ಕುಕ್ (ಸಸ್ಯಹಾರಿ ಮತ್ತು ಮಾಂಸಹಾರಿ) | 03 |
| 4. | ದೋಭಿ | 03 |
| 5. | ಜೋಡು ಹೊಲಿಯುವವ (Cobbler) | 01 |
| 6. | ತೋಟಮಾಲಿ (Gardner) | - |
| 7. | ದರ್ಜಿ (Tailor) | 01 |
| 8. | ಎಲೆಕ್ಟ್ರಿಷಿಯನ್ | 01 |
| 9. | ಪ್ಲಂಬರ್ | 01 |
| 10. | ಕಾರ್ಪೆಂಟರ್ | 01 |
| | ಒಟ್ಟು | 19 |

ಟಿಪ್ಪಣಿ: 1)ಅನುಯಾಯಿ ಹುದ್ದೆಗಳಲ್ಲಿ ವೃತ್ತಿವಾರು ಖಾಲಿಯಿರುವ ಹುದ್ದೆಗಳನ್ನು ಭರ್ತಿಮಾಡುವಾಗ, ಮೇಲೆ ಅಧಿಸೂಚನೆ ಹೊರಡಿಸಿರುವ ಪ್ರವರ್ಗವಾರು ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ (ಎಸ್‌ಸಿ/ಎಸ್‌ಟಿ ಹೊರತುಪಡಿಸಿ) ಸದರಿ ಖಾಲಿ ಹುದ್ದೆಗಳನ್ನು ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ/08/ಸೇಹಿಮ/95, ದಿನಾಂಕ: 20.06.1995ರನ್ವಯ ಸಾಮಾನ್ಯ ವರ್ಗದ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು ಮತ್ತು ನಷ್ಟಗೊಂಡ ರಿಕ್ತ ಸ್ಥಾನಗಳನ್ನು ಮುಂದಿನ ಕ್ಯಾಲೆಂಡರ್ ವರ್ಷ ಅಥವಾ ತದನಂತರದ ಎರಡು ಕ್ಯಾಲೆಂಡರ್ ವರ್ಷಗಳಲ್ಲಿ ನೇರ ನೇಮಕಾತಿಗಳಲ್ಲಿ ಸರಿದೂಗಿಸಿಕೊಳ್ಳಲಾಗುವುದು.

2) ಗ್ರಾಮೀಣ, ಮಾಜಿ ಸೈನಿಕರು, ಮಹಿಳಾ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ಅಂತಹ ಖಾಲಿ ಹುದ್ದೆಗಳನ್ನು ಮೇಲೆ ನಮೂದಿಸಿರುವ ಅದೇ ಪ್ರವರ್ಗದ ಇತರೆ ಅಭ್ಯರ್ಥಿಗಳಿಂದ ತುಂಬಲಾಗುವುದು.

■ **ಅರ್ಹತಾ ಷರತ್ತುಗಳು**

1. ಭಾರತೀಯನಾಗಿರತಕ್ಕದ್ದು.
2. ಒಬ್ಬ ಜೀವಂತ ಪತ್ನಿಗಿಂತ ಹೆಚ್ಚು ಮಂದಿ ಪತ್ನಿಯರನ್ನು ಹೊಂದಿರುವ ಪುರುಷ ಅಭ್ಯರ್ಥಿ ಮತ್ತು ಈಗಾಗಲೇ ಇನ್ನೊಬ್ಬ ಹೆಂಡತಿಯಿರುವ ವ್ಯಕ್ತಿಯನ್ನು ಮದುವೆಯಾಗಿರುವ ಮಹಿಳಾ ಅಭ್ಯರ್ಥಿಯು ಸರ್ಕಾರದಿಂದ ಪೂರ್ವಾನುಮತಿಯನ್ನು ಪಡೆಯದೇ ನೇಮಕಾತಿಗೆ ಅರ್ಹರಾಗುವುದಿಲ್ಲ.
3. ಅಭ್ಯರ್ಥಿಯು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯ ವಂತನಾಗಿರಬೇಕು ಮತ್ತು ಅವರ ನೇಮಕಾತಿಯ ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆತಂಕವನ್ನುಂಟು ಮಾಡುವ ಸಂಭವವಿರುವ ಯಾವುದೇ ದೈಹಿಕ ನ್ಯೂನ್ಯತೆಯಿಂದ ಮುಕ್ತರಾಗಿರಬೇಕು.

■ **ವಯೋಮಿತಿ :**

1. **ಸಾಮಾನ್ಯ ಮತ್ತು ಮಹಿಳಾ ಅಭ್ಯರ್ಥಿಗಳಿಗೆ :**
ಅರ್ಜಿಯನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಂದರೆ ದಿನಾಂಕ: 10-03-2017 ಕ್ಕೆ ಅಭ್ಯರ್ಥಿಗೆ ಕನಿಷ್ಠ 19 ವರ್ಷ ವಯಸ್ಸಾಗಿರಬೇಕು ಹಾಗೂ ಈ ಕೆಳಕಂಡ ವಯಸ್ಸು ಮೀರಿರಬಾರದು.

ಅ) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರೆ ಹಿಂದುಳಿದ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳಿಗೆ 30 ವರ್ಷಗಳು.

ಆ) ಇತರೆ (ಸಾಮಾನ್ಯ) ಅಭ್ಯರ್ಥಿಗಳಿಗೆ 25 ವರ್ಷಗಳು.

■ **ವಿದ್ಯಾರ್ಹತೆ :**

ಅನುಯಾಯಿ ಹುದ್ದೆಗೆ 7ನೇ ತರಗತಿಯನ್ನು ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕದೊಳಗೆ ಉತ್ತೀರ್ಣರಾಗಿರಬೇಕು.

■ **ಆದ್ಯತೆ (Preference):**

ಅರ್ಜಿದಾರರು ಅರ್ಜಿ ಸಲ್ಲಿಸುವ ಹುದ್ದೆಗೆ ಸಂಬಂಧಿಸಿದ ವೃತ್ತಿಪರ (Trade) ಶಿಕ್ಷಣದಲ್ಲಿ ನೈಪುಣ್ಯತೆ ಹೊಂದಿದವರಿಗೆ ಆದ್ಯತೆ ನೀಡಲಾಗುವುದು.

**ಟಿಪ್ಪಣಿ :**

1. ನಿಗದಿಪಡಿಸಿರುವ ವಿದ್ಯಾರ್ಹತೆಯನ್ನು ಹೊಂದದೇ ಇರುವ ಅಭ್ಯರ್ಥಿಗಳ ಅರ್ಜಿಯನ್ನು ತಿರಸ್ಕರಿಸಲಾಗುವುದು. ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ನಿಗದಿತ ವಿದ್ಯಾರ್ಹತೆ ಪಡೆಯಲು ಪರೀಕ್ಷೆ ಬರೆದು ಫಲಿತಾಂಶಕ್ಕಾಗಿ ಕಾಯುತ್ತಿರುವ ಅಭ್ಯರ್ಥಿಗಳು ಅರ್ಹರಾಗಿರುವುದಿಲ್ಲ.

2. ನಿಗದಿತ ವಿದ್ಯಾರ್ಹತೆಯನ್ನು ಹೊರತುಪಡಿಸಿ, ಬೇರೆ ಯಾವ ವಿದ್ಯಾರ್ಹತೆಯನ್ನು ಪರಿಗಣಿಸಲಾಗುವುದಿಲ್ಲ. ಕೊನೆಯ ದಿನಾಂಕಕ್ಕೆ ಎಲ್ಲಾ ಅಭ್ಯರ್ಥಿಗಳು6 7ನೇ ತರಗತಿ ಪರೀಕ್ಷೆಯಲ್ಲಿ ಉತ್ತೀರ್ಣಹೊಂದಿದ ಅಂಕಪಟ್ಟಿಯನ್ನು ಹೊಂದಿರಬೇಕು.

■ **ಖಾಯಂ ಪೂರ್ವ ಅವಧಿ, ವೇತನ ಶ್ರೇಣಿ ಮತ್ತು ಪಿಂಚಣಿ ಸೌಲಭ್ಯ:**

ಅ) ನೇಮಕಾತಿಯಾದ ಅಭ್ಯರ್ಥಿಗಳು 2 ವರ್ಷದ ಖಾಯಂಪೂರ್ವ ಅವಧಿಯಲ್ಲಿರುತ್ತಾರೆ.

ಆ) ವೇತನ ಶ್ರೇಣಿ: ರೂ. 10400-200-12000-250-13000-300-14200-350-15600-400-16400.

ಇ) ಪಿಂಚಣಿ ಸೌಲಭ್ಯ : ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ (ಎಸ್‌ಪಿಎಲ್)/04/ಪಿಇಟಿ/2005, ದಿನಾಂಕ: 31.03.2006 ರಂತೆ ನೂತನ ಅಂಶದಾಯಿ ಪಿಂಚಣಿ ಸೌಲಭ್ಯ ಅನ್ವಯವಾಗುವುದು.

■ **ಆಯ್ಕೆ / ಲಿಖಿತ ಪರೀಕ್ಷೆ :**

ಕರ್ನಾಟಕ ರಾಜ್ಯ ಪೊಲೀಸ್ ಸೇವೆಗಳು, ಲಿಪಿಕ ವೃಂದ ಸೇರಿದಂತೆ (ನೇಮಕಾತಿ) ನಿಯಮಗಳು 2004ರ ಪ್ರಕಾರ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಲ್ಲಿ, ಅರ್ಹ ಅಭ್ಯರ್ಥಿಗಳಿಗೆ ಕನ್ನಡದಲ್ಲಿ ಪ್ರಬಂಧವನ್ನೊಳಗೊಂಡ 50 ಅಂಕಗಳ ಲಿಖಿತ ಪರೀಕ್ಷೆಯನ್ನು ಪೊಲೀಸ್ ತರಬೇತಿ ಶಾಲೆ, ಕಡೂರಿನಲ್ಲಿ ನಡೆಸಲಾಗುವುದು.

ಅಭ್ಯರ್ಥಿಗಳು ಲಿಖಿತ ಪರೀಕ್ಷೆಗೆ ಹಾಜರಾಗುವಾಗ ಕರೆಪತ್ರದ ಜೊತೆಗೆ ಈ ಕೆಳಕಂಡ ಯಾವುದಾದರೊಂದು ದೃಢೀಕೃತ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು.

1. ಪಾಸ್‌ಪೋರ್ಟ್
2. ಚಾಲನಾ ಪರವಾನಗಿ ಪತ್ರ
3. ಪ್ಯಾನ್ ಕಾರ್ಡ್
4. ರಾಜ್ಯ ಸರ್ಕಾರ/ಕೇಂದ್ರ ಸರ್ಕಾರ/ ಸಾರ್ವಜನಿಕ ಸ್ವಾಮ್ಯದ ಅಥವಾ ಸರ್ಕಾರದ ಅಧೀನಕ್ಕೊಳಪಟ್ಟ ಖಾಸಗಿ ಕಂಪನಿಗಳು ವಿತರಿಸಿರುವ ಭಾವಚಿತ್ರವಿರುವ ಸೇವಾ ಗುರುತಿನ ಚೀಟಿ
5. ಬ್ಯಾಂಕ್ ಪಾಸ್ ಪುಸ್ತಕ
6. ಭಾವಚಿತ್ರ ಸಮೇತ ನೊಂದಣಿಯಾಗಿರುವ ಸ್ವತ್ತಿನ ದಾಖಲೆ ಪತ್ರ ಅಥವಾ ಪಟ್ಟಾ ಪುಸ್ತಕ
7. ಜಾತಿ ಪ್ರಮಾಣ ಪತ್ರ
8. ಚುನಾವಣಾ ಆಯೋಗದ ಫೋಟೋ ಗುರುತಿನ ಚೀಟಿ
9. ಆಧಾರ್ ಕಾರ್ಡ್

ಲಿಖಿತ ಪರೀಕ್ಷೆಯ ಫಲಿತಾಂಶದ ಆಧಾರದ ಮೇಲೆ ಅಧಿಸೂಚನೆ ಹೊರಡಿಸಿರುವ ಪ್ರವರ್ಗವಾರು ಹುದ್ದೆಗಳಿಗೆ ಅನುಗುಣವಾಗಿ

☞ 8

7 ☜

ಪ್ರತಿಯೊಂದು ಹುದ್ದೆಗೆ 1:5ರ ಅನುಪಾತದಲ್ಲಿ ಅರ್ಹ ಅಭ್ಯರ್ಥಿಗಳಿಗೆ ನೈಪುಣ್ಯತೆ ಪರೀಕ್ಷೆಯನ್ನು (Proficiency Test) 50 ಅಂಕಗಳಿಗೆ ಮಾಡಲಾಗುವುದು. ನಂತರ ಸದರಿ ಅಭ್ಯರ್ಥಿಗಳಿಗೆ ವೈದ್ಯಕೀಯ ಪರೀಕ್ಷೆ ಹಾಗೂ ಮೂಲ ದಾಖಲಾತಿಗಳ ಪರೀಕ್ಷೆ ನಡೆಸಲಾಗುವುದು. ಅಭ್ಯರ್ಥಿಗಳು ವೈದ್ಯಕೀಯ ಪರೀಕ್ಷೆಗೆ ನೇಮಕಾತಿ ಸಮಿತಿಯು ರಚಿಸುವ ವೈದ್ಯಕೀಯ ಮಂಡಳಿಯ ಮುಂದೆ ಹಾಜರಾಗತಕ್ಕದ್ದು, ಹಾಜರಾಗುವ ವೇಳೆ, ಸ್ಥಳ ಹಾಗೂ ವೈದ್ಯಕೀಯ ಪರೀಕ್ಷೆಯ ವಿವರಗಳನ್ನು ನೇಮಕಾತಿ ಪ್ರಾಧಿಕಾರವು ನಿಗದಿಪಡಿಸುವುದು. ವೈದ್ಯಕೀಯ ಮಂಡಳಿಯು ದೈಹಿಕವಾಗಿ ಅರ್ಹರೆಂದು ಪ್ರಮಾಣೀಕರಿಸಿದ ಅಭ್ಯರ್ಥಿಗಳು ಮಾತ್ರ ನೇಮಕಾತಿಗೆ ಅರ್ಹರಾಗುವರು.

ತದನಂತರ, ಲಿಖಿತ ಪರೀಕ್ಷೆ ಮತ್ತು ನೈಪುಣ್ಯತೆ ಪರೀಕ್ಷೆಗಳಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ಅಧಿಸೂಚನೆ ಹೊರಡಿಸಿರುವ ಖಾಲಿ ಹುದ್ದೆಗಳಿಗೆ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗುವುದು. ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡುವ ಮೊದಲು ಅಂಕಪಟ್ಟಿ ಪರಿಶೀಲನೆ, ಅಭ್ಯರ್ಥಿಗಳ ಗುಣ ಮತ್ತು ನಡತೆ ಹಾಗೂ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳ ಪರಿಶೀಲನೆಯನ್ನು ಸಂಬಂಧಪಟ್ಟ ಪ್ರಾಧಿಕಾರದಿಂದ ಮಾಡಿಸಿ, ನಂತರ ನಿಯಮಾನುಸಾರ ಅರ್ಹ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಗುವುದು.

ನೇಮಕಾತಿಯಾದ ನಂತರ ಅಭ್ಯರ್ಥಿಗಳಿಗೆ ನೇಮಕಾತಿ ಪ್ರಾಧಿಕಾರವು ಅವರುಗಳು ಆಯ್ಕೆಯಾದ ವೃತ್ತಿಗನುಗುಣವಾಗಿ ಕರ್ತವ್ಯ ಹಂಚಿಕೆಯನ್ನು ಮಾಡಲಾಗುವುದು. ಅದರಂತೆ ಅಭ್ಯರ್ಥಿಗಳು ಕರ್ತವ್ಯ ನಿರ್ವಹಿಸುವುದು. ತಪ್ಪಿದಲ್ಲಿ ನೇಮಕಾತಿ ಆದೇಶವನ್ನು ರದ್ದುಪಡಿಸಲಾಗುವುದು.

- **ಜಾತಿ ಮೀಸಲಾತಿ ಪ್ರಮಾಣ ಪತ್ರಗಳು:**

ಜಾತಿ ಮೀಸಲಾತಿ ಕೋರಬಯಸುವ ಅಭ್ಯರ್ಥಿಗಳು ಈ ಕೆಳಕಂಡ ನಮೂನೆಗಳಲ್ಲಿ ಪ್ರಮಾಣ ಪತ್ರವನ್ನು ಅರ್ಜಿ ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದಿಟ್ಟುಕೊಂಡಿರತಕ್ಕದ್ದು.

ಎ) ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಸಂಬಂಧಪಟ್ಟ ತಹಶಿಲ್ದಾರ್‌ರವರಿಂದ ಪಡೆದ ನಮೂನೆ-ಡಿ ಪ್ರಮಾಣ ಪತ್ರ.

ಬಿ) ಪ್ರವರ್ಗ-1 ವರ್ಗದ ಅಭ್ಯರ್ಥಿಗಳಿಗೆ ಸಂಬಂಧಪಟ್ಟ ತಹಶೀಲ್ದಾರ್ ರವರಿಂದ ಪಡೆದ ನಮೂನೆ-ಇ ಪ್ರಮಾಣ ಪತ್ರ.

ಸಿ) ಪ್ರವರ್ಗ-2ಎ, ಪ್ರವರ್ಗ-2ಬಿ, ಪ್ರವರ್ಗ-3ಎ, ಪ್ರವರ್ಗ-3ಬಿ ವರ್ಗದ ಅಭ್ಯರ್ಥಿಗಳಿಗೆ ಸಂಬಂಧಪಟ್ಟ ತಹಶೀಲ್ದಾರ್‌ರವರಿಂದ ಪಡೆದ ನಮೂನೆ-ಎಫ್ ಪ್ರಮಾಣ ಪತ್ರ.

**ಸೂಚನೆ :** ನಮೂನೆ-ಎಫ್ ಪ್ರಮಾಣ ಪತ್ರವು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ: 10-03-2017ಕ್ಕೆ ಐದು ವರ್ಷಕ್ಕಿಂತ ಹಳೆಯದಾಗಿರಬಾರದು.

- **ಪ್ರಮುಖವಾದ ಸೂಚನೆಗಳು :**

ಅಭ್ಯರ್ಥಿಗಳು ಕೋರುವ ಮೀಸಲಾತಿಗನುಗುಣವಾಗಿ ಈ ಕೆಳಕಂಡ ಪ್ರಮಾಣ ಪತ್ರಗಳ ದೃಢೀಕೃತ ನಕಲು ಪ್ರತಿಗಳನ್ನು ಅರ್ಜಿಯೊಂದಿಗೆ ತಪ್ಪದೇ ಲಗತ್ತಿಸತಕ್ಕದ್ದು.

ಎ) ವಿದ್ಯಾರ್ಹತೆಯ ಅಂಕಪಟ್ಟಿ.

ಬಿ) ಹುಟ್ಟಿದ ದಿನಾಂಕದ ಪ್ರಮಾಣ ಪತ್ರ (ಜನನ ಪ್ರಮಾಣ ಪತ್ರ)

ಸಿ) ಸರ್ಕಾರಿ ಇಲಾಖೆಯಲ್ಲಿ / ರಾಜ್ಯ ಸರ್ಕಾರದ / ಕೇಂದ್ರ ಸರ್ಕಾರದ / ಸರ್ಕಾರದ ಯಾವುದೇ ಪ್ರಾಧಿಕಾರದಲ್ಲಿ / ರಾಜ್ಯ ಅಥವಾ ಕೇಂದ್ರ ಸರ್ಕಾರದ ಸಾರ್ವಜನಿಕ ಸ್ವಾಮ್ಯದ ಕಂಪನಿಗಳಲ್ಲಿ ಪ್ರಸ್ತುತ ಉದ್ಯೋಗಿಯಾಗಿದ್ದಲ್ಲಿ ಅಂತಹವರು ಇಲಾಖಾ ವತಿಯಿಂದ ಕರ್ತವ್ಯದಿಂದ ಬಿಡುಗಡೆ ಮಾಡುವ ಬಗ್ಗೆ ಇಚ್ಛಾ ಅನುಮತಿ ಪತ್ರ.

ಡಿ) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1, 2ಎ, 2ಬಿ, 3ಎ ಮತ್ತು 3ಬಿ ಮೀಸಲಾತಿ ಅಭ್ಯರ್ಥಿಗಳು ನಮೂನೆ-ಡಿ/ಇ/ಎಫ್ ನಲ್ಲಿ ತಹಶೀಲ್ದಾರ್‌ರಿಂದ ಪಡೆದ ಪ್ರಮಾಣ ಪತ್ರ.

ಇ) ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರಿಂದ ಪಡೆದು ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಮೇಲು ರುಜು ಮಾಡಿಸಿರಬೇಕು.

*ಟಿಪ್ಪಣಿ : ಅರ್ಜಿಯನ್ನು ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದ ನಂತರ ಮಾಡಿಸುವ ಮೀಸಲಾತಿ ಪ್ರಮಾಣ ಪತ್ರಗಳನ್ನು ಯಾವುದೇ ಹಂತದಲ್ಲಿ ಗಣನೆಗೆ ತೆಗೆದುಕೊಳ್ಳುವುದಿಲ್ಲ*

ಎಫ್) ಅಭ್ಯರ್ಥಿಯು ಅರ್ಜಿಯಲ್ಲಿ ಭರ್ತಿ ಮಾಡಿದ ಮಾಹಿತಿಯು ಅಂತಿಮವಾಗಿರುತ್ತದೆ. ಆದ್ದರಿಂದ ಅಭ್ಯರ್ಥಿಗಳು ಅರ್ಜಿಯನ್ನು ಭರ್ತಿ ಮಾಡುವಾಗ ಅರ್ಜಿಯ ಎಲ್ಲಾ ಕಾಲಂಗಳನ್ನು ಸರಿಯಾಗಿ ಭರ್ತಿ ಮಾಡತಕ್ಕದ್ದು.

ಜಿ) ನೇಮಕಾತಿ ಪ್ರಕ್ರಿಯೆಯ ಯಾವುದೇ ಹಂತದಲ್ಲಿ ವಿಳಾಸ ಬದಲಾವಣೆಯಾಗಿದ್ದಲ್ಲಿ ತಕ್ಷಣದಲ್ಲಿ ಅಭ್ಯರ್ಥಿಗಳು ಲಿಖಿತ ಮೂಲಕ ಸಂಬಂಧಪಟ್ಟ ಘಟಕಾಧಿಕಾರಿ (ಪೊಲೀಸ್ ಸೂಪರಿಂಟೆಂಡೆಂಟ್/ ಪೊಲೀಸ್ ಕಮೀಷನರ್) ರವರ ನೇಮಕಾತಿ ಸಮಿತಿಯ ಗಮನಕ್ಕೆ ತರತಕ್ಕದ್ದು. ಈ ವಿಳಾಸ ಬದಲಾವಣೆಯನ್ನು ಪರಿಗಣಿಸಲು ನೇಮಕಾತಿ ಸಮಿತಿಯು ಪ್ರಯತ್ನಿಸುವುದು. ಆದಾಗ್ಯೂ ಈ ವಿಚಾರದಲ್ಲಿ ನೇಮಕಾತಿ ಸಮಿತಿಯು ಯಾವುದೇ ಜವಾಬ್ದಾರಿಯನ್ನು ವಹಿಸಿಕೊಳ್ಳುವುದಿಲ್ಲ, ಈ ಬಗ್ಗೆ ಅಭ್ಯರ್ಥಿಗಳು ಎಚ್ಚರ ವಹಿಸತಕ್ಕದ್ದು.

ಹೆಚ್) ಅಭ್ಯರ್ಥಿಗಳು ಅರ್ಜಿಯನ್ನು ಭರ್ತಿ ಮಾಡುವಾಗ ಯಾವುದೇ ಸುಳ್ಳು / ತಪ್ಪು ಮಾಹಿತಿಗಳನ್ನು ನೀಡಬಾರದು. ಹಾಗೇ ನೀಡಿ ತದನಂತರ ನೇಮಕಾತಿ ಸಮಿತಿಗೆ ಅದು ಪತ್ತೆಯಾದಲ್ಲಿ ಅಂತಹ ಅಭ್ಯರ್ಥಿಗಳ ಅಭ್ಯರ್ಥಿತನವನ್ನು ರದ್ದುಪಡಿಸಲಾಗುವುದು.

- **ವಿಶೇಷ ಸೂಚನೆಗಳು :**

ಅಭ್ಯರ್ಥಿಗಳು ನೇಮಕಾತಿ ಸಮಿತಿಯು ನಿಗಧಿಪಡಿಸಿದ ಅರ್ಜಿ ನಮೂನೆಯಲ್ಲಿಯೇ ಎಲ್ಲಾ ಅಂಕಣಗಳನ್ನು ಸ್ಪಷ್ಟವಾಗಿ ಭರ್ತಿ ಮಾಡತಕ್ಕದ್ದು. ಇತರೆ ಯಾವುದೇ ನಮೂನೆಗಳಲ್ಲಿ ಸಲ್ಲಿಸುವ, ಶುಲ್ಕ ಪಾವತಿಸದೆ ಸಲ್ಲಿಸಲ್ಪಡುವ, ಅಪೂರ್ಣವಾಗಿರುವ, ಸಹಿ ಮಾಡದ ಹಾಗೂ ಭಾವಚಿತ್ರ ಇಲ್ಲದೆ ಇರುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು ಹಾಗೂ ಈ ಕೆಳಕಂಡ ವಿಶೇಷ ಸೂಚನೆಗಳನ್ನು ಗಮನಿಸುವುದು.

ಎ) ಸೇವೆಯಲ್ಲಿರುವ ಅಭ್ಯರ್ಥಿಗಳು ಅವರು ಸೇವೆಯಲ್ಲಿರುವ ಬಗ್ಗೆ ಅರ್ಜಿಯಲ್ಲಿನ ನಿಗದಿತ ಕಾಲಂನ್ನು ತುಂಬತಕ್ಕದ್ದು ಹಾಗೂ ಅವರ ಸೇವಾ ಪ್ರಮಾಣ ಪತ್ರ ಮತ್ತು ಸದರಿ ಹುದ್ದೆಗೆ ಅರ್ಜಿ ಸಲ್ಲಿಸುವ ಬಗ್ಗೆ ನಿರಾಕ್ಷೇಪಣ ಪ್ರಮಾಣ ಪತ್ರವನ್ನು (No Objection Certificate) ಸಂಬಂಧಿತ ಇಲಾಖಾ ಮುಖ್ಯಸ್ಥರಿಂದ ಪಡೆದು, ಸಲ್ಲಿಸತಕ್ಕದ್ದು.

ಬಿ) ಒಂದು ವೇಳೆ ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕವು ಸಾರ್ವತ್ರಿಕ ರಜಾ/ಬಂದ್ ದಿನವಾಗಿ ಘೋಷಿಸಲ್ಪಟ್ಟರೆ ಆ ದಿನಾಂಕದ ಮಾರನೆಯ ಕೆಲಸದ ದಿನದಂದು ಅರ್ಜಿಗಳನ್ನು ಸ್ವೀಕರಿಸಲಾಗುವುದು. ಆದರೆ ವಯೋಮಿತಿ ಹಾಗೂ ಕನಿಷ್ಠ ಶೈಕ್ಷಣಿಕ ವಿದ್ಯಾರ್ಹತೆಯ ಪರಿಗಣನೆಗೆ ದಿನಾಂಕ: 10-03-2017 ಮಾತ್ರ ಅನ್ವಯವಾಗುತ್ತದೆ.

ಸಿ) ಅಭ್ಯರ್ಥಿಯು ಅರ್ಜಿಯನ್ನು ಸಮರ್ಪಕವಾಗಿ ತುಂಬದೇ ಸದರಿ ಅರ್ಜಿ ತಿರಸ್ಕೃತವಾದಲ್ಲಿ ತತ್ಸಂಬಂಧ ಯಾವುದೇ ರೀತಿಯ ಪತ್ರ ವ್ಯವಹಾರಕ್ಕೆ ಅವಕಾಶವಿರುವುದಿಲ್ಲ.

ಡಿ) ಕರ್ನಾಟಕ ರಾಜ್ಯದ, ಕೇಂದ್ರ ಸರ್ಕಾರದ ಯಾವುದೇ ಸರ್ಕಾರಿ ಹಾಗೂ ಅರೆ ಸರ್ಕಾರಿ ಸಂಸ್ಥೆಯ ಸೇವೆಯಿಂದ ವಜಾಗೊಂಡಿರುವ ನೌಕರರು ನೇಮಕಾತಿಗೆ ಅರ್ಹರಲ್ಲ.

ಇ) ಅಭ್ಯರ್ಥಿಯು ಹುದ್ದೆಗೆ ಅರ್ಜಿ ಸಲ್ಲಿಸಿದ ತಕ್ಷಣ ತಾನು ನಿಯಮ ಮತ್ತು ನಿಬಂಧನೆಗಳಿಗೆ (Rules & Regulations) ಬದ್ಧನಾಗಿರುತ್ತಾರೆ ಎಂದು ಭಾವಿಸಲಾಗಿರುತ್ತದೆ. ಒಂದು ವೇಳೆ ತಾನು ಸದರಿ ಹುದ್ದೆಗೆ ಆಯ್ಕೆಯಾಗದ ಪಕ್ಷದಲ್ಲಿ ತದನಂತರ ಅದೇ ನಿಯಮಗಳನ್ನು ಪ್ರಶ್ನಿಸಲು ಬರುವುದಿಲ್ಲ.

ಎಫ್) ದುರ್ನಡತೆ: ಒಬ್ಬ ಅಭ್ಯರ್ಥಿಯು ನಕಲಿ ವ್ಯಕ್ತಿಯಾಗಿರುವನೆಂದು ಅಥವಾ ಖೋಟಾ ದಸ್ತಾವೇಜು ಅಥವಾ ತಿದ್ದಲಾದ ದಸ್ತಾವೇಜುಗಳನ್ನು ಸಲ್ಲಿಸಿರುವನೆಂದು ಅಥವಾ ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿರುವನೆಂದು ಅಥವಾ ವಾಸ್ತವಿಕ ಮಾಹಿತಿಯನ್ನು ಮರೆಮಾಚಿರುವನೆಂದು ಅಥವಾ ನೇಮಕಾತಿ ಉದ್ದೇಶಗಳಿಗಾಗಿ ನಡೆಸಲಾದ ಪರೀಕ್ಷೆಯಲ್ಲಿ ಅನುಚಿತ ಮಾರ್ಗವನ್ನು ಅನುಸರಿಸುತ್ತಿರುವನೆಂದು ಅಥವಾ ಪರೀಕ್ಷಾ ಕೊಠಡಿಯಲ್ಲಿ ದುರ್ವರ್ತಿಸುತ್ತಿರುವನೆಂದು, ತಪ್ಪಿತಸ್ಥನೆಂದು ಕಂಡುಬಂದಲ್ಲಿ ಹಾಗೂ ನೇಮಕಾತಿ ಸಮಿತಿಯಿಂದ ನೀಡಲಾದ ಯಾವುದೇ ಸೂಚನೆಗಳನ್ನು ಉಲ್ಲಂಘಿಸುತ್ತಿರುವನೆಂದು ಅಥವಾ ಅವನು ನೇಮಕಾತಿಯ ಸಂಬಂಧದಲ್ಲಿ ಯಾವುದೇ ಇತರೆ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅವಲಂಬಿಸಿರುವನೆಂದು, ಕಂಡುಬಂದಲ್ಲಿ ಅಭ್ಯರ್ಥಿಯು ಸ್ವತಃ ಕ್ರಿಮಿನಲ್ ವ್ಯವಹರಣೆಗಳಿಗೆ ಮತ್ತು ಶಿಸ್ತು ಕ್ರಮಕ್ಕೆ ಒಳಪಡುವುದಲ್ಲದೆ; ನೇಮಕಾತಿ ಸಮಿತಿ ನಡೆಸುವ ಯಾವುದೇ ಪರೀಕ್ಷೆಗೆ ಪ್ರವೇಶ ಪಡೆಯುವುದರಿಂದ ಅಥವಾ ಯಾವುದೇ ಹುದ್ದೆಯ ಆಯ್ಕೆಗೆ ಖಾಯಂ ಆಗಿ ಡಿಬಾರ್ ಮಾಡಲಾಗುವುದು.

# ಸಿಆರ್‌ಪಿಎಫ್‌ನಲ್ಲಿ ಕಾನ್‌ಸ್ಟೇಬಲ್ ನೇಮಕಾತಿ

ಕೇಂದ್ರ ಮೀಸಲು ಪೊಲೀಸ್ ಪಡೆ ಕಾನ್‌ಸ್ಟೇಬಲ್ (ಟೆಕ್ನಿಕಲ್ ಮತ್ತು ಟ್ರೇಡ್ಸ್‌ಮನ್) ಹುದ್ದೆಗಳಿಗೆ ಅರ್ಜಿ ಆಹ್ವಾನಿಸಿದೆ. ಬಿಹಾರ, ಮಧ್ಯಪ್ರದೇಶ, ಉತ್ತರ ಪ್ರದೇಶ, ಪಂಜಾಬ್, ತೆಲಂಗಾಣ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ಲಭ್ಯವಿರುವ ಸಾವಿರಾರು ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳುತ್ತಿದೆ.

ಕರ್ನಾಟಕ ರಾಜ್ಯದಲ್ಲಿ138 ಹುದ್ದೆ ಖಾಲಿ ಇದ್ದು, ಅರ್ಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು.

**ಹುದ್ದೆಗಳ ವಿಂಗಡಣೆ:** ಡ್ರೈವರ್, ಫಿಟ್ಟರ್, ಬಗ್ಲರ್, ಟೈಲರ್, ಬ್ರಾಸ್ ಬ್ಯಾಂಡ್, ಪೈಪ್‌ಬ್ಯಾಂಡ್, ಬಾರ್ಬರ್, ಹೈರ್ ಡ್ರೆಸರ್, ಕಾಬ್ಲರ್, ಕಾರ್ಪೆಂಟರ್, ಗಾರ್ಡನರ್, ಪೇಂಟರ್, ಕುಕ್, ವಾಟರ್ ಕ್ಯಾರಿಯರ್, ವಾಷರ್, ಸಫಾಯಿ ಕರ್ಮಚಾರಿ.

**ವೇತನ:** ರೂ. 21,700-50,000.

**ವಯಸ್ಸು:** ಆಯಾ ಹುದ್ದೆಗಳಿಗನುಗುಣವಾಗಿ 18-23/21-27 ವರ್ಷ ವಯೋಮಿತಿಯನ್ನು ನಿಗದಿಪಡಿಸಲಾಗಿದೆ. ಒಬಿಸಿ ಅಭ್ಯರ್ಥಿಗಳಿಗೆ 3 ವರ್ಷ ಮತ್ತು ಎಸ್‌ಸಿ/ಎಸ್‌ಟಿ ಅಭ್ಯರ್ಥಿಗಳಿಗೆ 5 ವರ್ಷಗಳ ವಯೋಸಡಿಲಿಕೆ ಇದೆ.

**ಅರ್ಹತೆ:** ಆಯಾ ಹುದ್ದೆಗಳಿಗನುಗುಣವಾಗಿ ಮೆಟ್ರಿಕ್ಯುಲೇಷನ್/ ತತ್ಸಮಾನ ಮತ್ತು 10+2/ತತ್ಸಮಾನ ವಿದ್ಯಾರ್ಹತೆ ಜತೆಗೆ ಅಗತ್ಯ ದೈಹಿಕ ಸದೃಢತೆ ಹೊಂದಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು.

**ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿದ್ದು, ಚಲನ್ (ಎಸ್‌ಬಿಐ ಬ್ಯಾಂಕ್ ಮಾತ್ರ) ಮೂಲಕ ರೂ. 100 (ಎಸ್‌ಸಿ/ಎಸ್‌ಟಿ/ಮಹಿಳಾ ಅಭ್ಯರ್ಥಿಗಳಿಗೆ ಶುಲ್ಕ ವಿನಾಯಿತಿ ಇದೆ) ಅರ್ಜಿ ಶುಲ್ಕ ಸಲ್ಲಿಸಬೇಕಾಗುತ್ತದೆ.

**ನೇಮಕಾತಿ ವಿಧಾನ:** ಲಿಖಿತ ಪರೀಕ್ಷೆ/ ವಿಭಾಗ ಪರೀಕ್ಷೆ/ ವೈದ್ಯಕೀಯ ಪರೀಕ್ಷೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗುತ್ತದೆ. ನೇಮಕಾತಿಗೆ ಸಂಬಂಧಿಸಿದಂತೆ ವರ್ಗವಾರು ಸಾಮಾನ್ಯ ಮೀಸಲಾತಿ ಅನ್ವಯ.

**ಪರೀಕ್ಷಾ ವಿಧಾನ:** ಮೊದಲು ದೈಹಿಕ ಸದೃಢತೆ ಪರೀಕ್ಷೆ, ಬಳಿಕ ಲಿಖಿತ ಪರೀಕ್ಷೆ, ವೈದ್ಯ ಪರೀಕ್ಷೆ ನಡೆಯಲಿದ್ದು, ಲಿಖಿತ ಪರೀಕ್ಷೆ ಮೇ 14ರಂದು ನಿಗದಿಯಾಗಿದೆ. ಬಳಿಕ ಆಯಾ ವಿಭಾಗಕ್ಕೆ ಸಂಬಂಧಿಸಿದ ಕೌಶಲ ಪರೀಕ್ಷೆ ನಡೆಸಲಾಗುವುದು.

**ದೈಹಿಕ ಸದೃಢತೆ:** ಪುರುಷ ಅಭ್ಯರ್ಥಿಗಳಿಗೆ-ಎತ್ತರ ಕನಿಷ್ಠ170 ಸೆಂ.ಮೀ. ಮತ್ತು ಎದೆಯ ಸುತ್ತಳತೆ 80 ಸೆಂ.ಮೀ. (ಉಬ್ಬಿಸಿದಾಗ 85), ಮಹಿಳಾ ಅಭ್ಯರ್ಥಿಗಳಿಗೆ ಎತ್ತರ ಕನಿಷ್ಠ157 ಸೆಂ.ಮೀ.)

ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದ ನೇಮಕಾತಿ ಕಚೇರಿ: ದಿ ಡಿಐಜಿಪಿ, ಗ್ರೂಪ್ ಸೆಂಟರ್ ಸಿಆರ್‌ಪಿಎಫ್, ಯಲಹಂಕ, ಬೆಂಗಳೂರು - 560 064.

ಸಹಾಯವಾಣಿ ಸಂಖ್ಯೆ: 080-28567730.

**ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 1-3-2017.**

ವೆಬ್‌ಸೈಟ್ - www.crpfindia.com ಅಥವಾ www.crpf.nic.in


## ಉದ್ಯೋಗಾವಕಾಶಗಳು

ನಿಮಗೆ ಹಣದ ಅವಶ್ಯಕತೆ ಇದೆಯೇ? ನಿಮ್ಮ ಮನೆಯಲ್ಲಿ ಕುಳಿತು **Full Time or Part Time** ಅಂಚೆ ಪತ್ರಗಳನ್ನು ಕಳುಹಿಸುತ್ತಾ **Mail order** ಮೂಲಕ ತಿಂಗಳಿಗೆ ರೂ. 25,000/-ರಿಂದ 30,000/- ಗಳನ್ನು ಗಳಿಸಬಹುದು. ನಿಮ್ಮ ಸಂಪೂರ್ಣ ವಿಳಾಸವನ್ನು ಕೆಳಕಂಡ ಮೊಬೈಲ್ ಸಂಖ್ಯೆಗೆ **SMS** ಕಳುಹಿಸಿದ ನಂತರ ಮಾಹಿತಿಯನ್ನು ಪೋಸ್ಟ್ ಮುಖಾಂತರ ಕಳುಹಿಸಲಾಗುವುದು.

**ಸಂಪರ್ಕಿಸಿ:**

**9900745123**

(ಜಾಹೀರಾತು)


Vol. 8 No. 3 Edited, Printed, Published & Owned by M. RAHUL, Printed at SHRI OMKAR ENTERPRISES # 4/1, Mahimappa Industrial Estate, 100ft Road, Jalahalli Cross, Chokkasandra, BANGALORE-560 057. Published at # 4/1, Mahimappa Industrial Estate, 100ft Road, Jalahalli Cross, Chokkasandra, BANGALORE-560 057. ☎ 080-23588510, 8971302735, 8971302717

Email: udyogaspoorthi@gmail.com